ಸಂಪುಟ : 8 ಸಂಚಿಕೆ : 207 ಪುಟ : 4 ಬೆಲೆ : 3.00 ಶುಕ್ರವಾರ ಸಪ್ಟೆಂಬರ್ 22, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 207 Pages : 4 Price : 3.00 Friday September 22, 2023 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಗದಗ-ಬೆಟಗೇರಿ ಅವಳಿ ನಗರದಲ್ಲಿ ಇಂದು ನೀರು ಪೂರೈಕೆ ಎಲ್ಲೆಲ್ಲಿ?

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದಲ್ಲಿ ಸೆಪ್ಟೆಂಬರ್ 22 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

**ಸ್ಥಳಗಳ ವಿವರ :** ವಾರ್ಡ್ ನಂ. 01 ರಲ್ಲಿ ಎಸ್.ಎಮ್. ಕೃಷ್ಣ ನಗರ, ಮೇಲಿನ ಭಾಗ, ಕೆಳಗಿನ ಭಾಗ, ವಾರ್ಡ್ ನಂ. 28, 29ರಲ್ಲಿ ಪಂಚಾಕ್ಷರಿ ನಗರ, ರಾಜೀವಗಾಂಧಿನಗರ, ವಾರ್ಡ್ ನಂ. 10ರಲ್ಲಿ ಶಿರಹಟ್ಟಿ ಓಣಿ, ತೆಗ್ಗಿನಪೇಟೆ, ಕೊಂಡವಾಡ, ವಾರ್ಡ್ ನಂ. 8ರಲ್ಲಿ ಗಣಪತಿಗುಡಿ, ಕಂಗೂರಿ ಓಣಿ, ಮಲ್ಲಯ್ಯನಕಟ್ಟಿ, ಕಲಬುರ್ಗಿ ಓಣಿ, ಕಲ್ಮಠ ಓಣಿ, ಕೆಲವು ಭಾಗಗಳು,

ವಾರ್ಡ್ ನಂ. 28ರಲ್ಲಿ ಕೃಷ್ಣ ಟ್ಯೂಷನ್ ಲೈನ್, ಸೊಲ್ಲಾಪಟ್ಟಿ ಅವರ ಲೈನ್, ವಾರ್ಡ್ ನಂ. 20 ರಲ್ಲಿ ಖಾನತೋಟ, ಶರೀಫಜ್ಜನ ಗದ್ದುಗೆ ಭಾಗ-1, ಭಾಗ-2 ಭಾಗ-3 ಬಳ್ಳಾರಿಯವರ ಲೈನ್ , ಭಾಗ-1, ಭಾಗ-2 ಭಾಗ-3 ಪಲ್ಲೇದರ ಲೈನ್, ವಾರ್ಡ್ ನಂ. 19 ರಲ್ಲಿ ಸಿಟಿ ಹಾಲ್ , ಭಾಗ-1,2,3, ವಾರ್ಡ್ ನಂ. 16ರಲ್ಲಿ ರಹಮತನಗರ ಭಾಗ-1,2,3 ಕೆಲವು ಭಾಗಗಳು

ತಾಂತ್ರಿಕವಾಗಿ ನೀರು ಪೂರೈಕೆಯಲ್ಲಿ ಒಂದು ವೇಳೆ ಅಡತಡೆಯಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಬೇಕೆಂದು ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಜನರು ನಾಗಪುರಕ್ಕೆ ಭೇಟಿ ಮಾಡಲು ಅನುಕೂಲವಾಗುವಂತೆ ಸರ್ಕಾರದ ಪರವಾಗಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಪ್ರಯಾಣದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ. 2023-24ನೇ ಸಾಲಿನಲ್ಲಿ ಅರ್ಜಿಯನ್ನು ಸಮಾಜ ಕಲ್ಯಾಣ ಇಲಾಖೆಯ ವೆಬ್‌ಸೈಟ್ www.sw.kar.nic.in ರಲ್ಲಿ ಅಕ್ಟೋಬರ್ 10 ರವರಗೆ ಆಹ್ವಾನಿಸಲಾಗಿದೆ ಎಂದು ಗದಗ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪ್ರೋತ್ಸಾಹ ಧನಕ್ಕಾಗಿ ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

2023-24ನೇ ಸಾಲಿಗೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಗದಗ ಇವರಿಂದ ಅಲ್ಪಸಂಖ್ಯಾತರ ಬಿ.ಎಡ್ ಹಾಗೂ ಡಿ.ಎಡ್ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನಕ್ಕಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಹಾಗೂ ಅರ್ಹ ಅಲ್ಪಸಂಖ್ಯಾತರ (ಮುಸ್ಲಿಂ, ಜೈನ್, ಕ್ರಿಶ್ಚಿಯನ್, ಸಿಖ್, ಬೌದ್ಧ, ಪರ್ಶಿಯನ್) ವಿದ್ಯಾರ್ಥಿಗಳ ಕೋರಿಕೆ ಮತ್ತು ಸಹಾಯವಾಣಿಗೆ ಕರೆಗಳು ಬರುತ್ತಿರುವ ಕಾರಣ ಸೆಪ್ಟೆಂಬರ್ 30ರವರೆಗೆ ವಿಸ್ತರಿಸಲಾಗಿದೆ. ಅಲ್ಪಸಂಖ್ಯಾತ ವಿದ್ಯಾರ್ಥಿಗಳು ಸೇವಾಸಿಂಧು ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಬೇಕು. ಅರ್ಜಿಗಳನ್ನು ಖುದ್ದಾಗಿ ಅಭ್ಯರ್ಥಿಗಳೇ ಹಾಜರಾಗಿ ಅಕ್ಟೋಬರ್ 3 ರಂದು ಸಂಜೆ 4 ಗಂಟೆಯೊಳಗೆ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಗದಗ ರವರ ಕಚೇರಿಗೆ ಸಲ್ಲಿಸಬಹುದಾಗಿದೆ.

ಅಭ್ಯರ್ಥಿಗಳು ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿರಬೇಕು. ಅಭ್ಯರ್ಥಿಗಳ ಪೋಷಕರ ವರಮಾನ ರೂ 6.00 ಲಕ್ಷಕ್ಕೆ ಮೀರಿರಬಾರದು. ಅಂಚೆ ತೆರಪು/ಅರೆಕಾಲಿಕ/ದೂರ ಶಿಕ್ಷಣದಲ್ಲಿ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳು ಅರ್ಹರಿರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಮೌಲಾನಾ ಆಜಾದ ಭವನ, ಗದಗ ಜಿಲ್ಲಾ ನ್ಯಾಯಾಲಯದ ಎದುರುಗಡೆ, ಗದಗ ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

## ಅ. 5ರಂದು ಶಿಕ್ಷಣ ಅದಾಲತ್ ಕಾರ್ಯಕ್ರಮ

■ ವಿಜಯಸಾಕ್ಷಿ ಸುದ್ದಿ, ಗದಗ

2023-24ನೇ ಸಾಲಿಗೆ ಶಾಲಾ ಶಿಕ್ಷಣ ಇಲಾಖೆಯ ಬೆಳಗಾವಿ ವಿಭಾಗ ಮಟ್ಟದ ಶಿಕ್ಷಣ ಅದಾಲತ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಗದಗ ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದ ಕಾರ್ಯಕ್ರಮವನ್ನು ಅಕ್ಟೋಬರ್ 05 ರಂದು ನಡೆಸುವಂತೆ ಧಾರವಾಡದ ಶಾಲಾ ಶಿಕ್ಷಣ ಇಲಾಖೆಯ ಅಪರ ಆಯುಕ್ತರು ಸೂಚಿಸಿರುತ್ತಾರೆ. ಈ ಕುರಿತು ಇಲಾಖೆಗೆ ಸಂಬಂಧಿಸಿದ ಅಹವಾಲುಗಳನ್ನು ಸೆಪ್ಟೆಂಬರ್ 30 ರವರೆಗೆ ಸ್ವೀಕರಿಸಲಾಗುವುದು. ಉಪನಿರ್ದೇಶಕರ ಕಚೇರಿ, ಶಾಲಾ ಶಿಕ್ಷಣ ಇಲಾಖೆ, ಗದಗ ಈ ಕಚೇರಿಗೆ ಶಿಕ್ಷಕರ, ಸಂಘ ಸಂಸ್ಥೆಗಳ ಮತ್ತು ಸಾರ್ವಜನಿಕರಿಂದ ಸಮಯವನ್ನು ನಿಗದಿಪಡಿಸಲಾಗಿದೆ. ಅಕ್ಟೋಬರ್ 05 ರಂದು ಜಿಲ್ಲಾ ಮಟ್ಟದ ಶಿಕ್ಷಣ ಅದಾಲತ್ ಕಾರ್ಯಕ್ರಮವು ಉಪನಿರ್ದೇಶಕರ ಕಚೇರಿ, ಶಾಲಾ ಶಿಕ್ಷಣ ಇಲಾಖೆ, ಗದಗ ಈ ಕಚೇರಿಯಲ್ಲಿ ಮುಂಜಾನೆ 10-30 ರಿಂದ 2.00 ವರೆಗೆ ನಡೆಯಲಿದೆ ಎಂದು ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಾರ್ವಜನಿಕರ ಗಮನಕ್ಕೆ

■ ವಿಜಯಸಾಕ್ಷಿ ಸುದ್ದಿ, ಗದಗ

ಭಾರತಿ ಅಂಬೇಕರ ವಯಾ 65 ಎಂಬ ಮಾನಸಿಕ ಅಸ್ವಸ್ಥ ಮಹಿಳೆಯು ಸೆಪ್ಟೆಂಬರ್ 21 ರಂದು ಅಸುನೀಗಿದ್ದಾಳೆ.

ಮೃತಳ ಶವ ಸೆಪ್ಟೆಂಬರ್ 21 ರಿಂದ 23 ರವರೆಗೆ 3 ದಿನಗಳ ಕಾಲ ಜಿಮ್ಸ್ ಆಸ್ಪತ್ರೆ ಮಲ್ಲಸಮುದ್ರ ಶವಾಗಾರದಲ್ಲಿ ಇಡಲಾಗಿದೆ. ಮೃತಳ ಸಂಬಂಧಿಕರು ಯಾರಾದರೂ ಇದ್ದರೆ ಉಪನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾಡಳಿತ ಭವನ ರೂಂ. ನಂ. 6 ಹುಬ್ಬಳ್ಳಿ ರಸ್ತೆ, ಗದಗ ಇಲ್ಲಿ ಸಂಪರ್ಕಿಸಬೇಕೆಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಪ್ರಕಟಣೆ ತಿಳಿಸಿದೆ.

## ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ರೋಣ

2023-24ನೇ ಸಾಲಿನ 1ರಿಂದ 10ನೇ ತರಗತಿಯ ಎಸ್ಸಿ ಹಾಗೂ ಎಸ್ಟಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ವಿದ್ಯಾರ್ಥಿಗಳು ಅಗತ್ಯ ದಾಖಲಾತಿಗಳೊಂದಿಗೆ ಅಕ್ಟೋಬರ್ 20ರೊಳಗೆ ಅರ್ಜಿಗಳನ್ನು ಸಲ್ಲಿಸಬೇಕು.

ಈ ಹಿಂದೆ ಅರ್ಜಿಗಳನ್ನು ಸಲ್ಲಿಸಿರುವ ವಿದ್ಯಾರ್ಥಿಗಳು ಈಗ ಪುನಃ ಅರ್ಜಿಗಳನ್ನು ಸಲ್ಲಿಸುವಂತಿಲ್ಲ. ಹೆಚ್ಚಿನ ಮಾಹಿತಿಗಾಗಿ ಸಮಾಜ ಕಲ್ಯಾಣ ಇಲಾಖೆ ಕಚೇರಿಯನ್ನು ಸಂಪರ್ಕಿಸಬೇಕು ಎಂದು ತಾಲೂಕಾಧಿಕಾರಿ ಶಿವಾನಂದ ಹರ್ತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಶಿರಹಟ್ಟಿ ತಾ.ಪಂ ಮಾಸಿಕ ಕೆಡಿಪಿ ಸಭೆಯಲ್ಲಿ ಆಡಳಿತಾಧಿಕಾರಿ ಕಂಬಾಳಿಮಠ ಸೂಚನೆ

# ಜಿಲ್ಲಾ ಉಸ್ತುವಾರಿ ಸಚಿವರ ಸೂಚನೆ ಉಲ್ಲಂಘಿಸಬೇಡಿ

■ ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ತಾಲೂಕಿನ ಪ್ರಗತಿ ಪರಿಶೀಲನೆ ವೇಳೆ ಜಿಲ್ಲಾ ಉಸ್ತುವಾರಿ ಸಚಿವರಾದ ಎಚ್.ಕೆ ಪಾಟೀಲ ಅವರು ಸಭೆಯಲ್ಲಿ ನೀಡಿದ ಸೂಚನೆಯನ್ನು ತಾಲೂಕಾ ಮಟ್ಟದ ಯಾವ ಅಧಿಕಾರಿಗಳೂ ಉಲ್ಲಂಘಿಸಬೇಡಿ ಎಂದು ಶಿರಹಟ್ಟಿ ತಾ.ಪಂ ಆಡಳಿತಾಧಿಕಾರಿ ಎ.ಎ ಕಂಬಾಳಿಮಠ ಹೇಳಿದರು.

ಅವರು ಗುರುವಾರ ಶಿರಹಟ್ಟಿಯ ತಾ.ಪಂ ಸಭಾಭವನದಲ್ಲಿ ಜರುಗಿದ ಮಾಸಿಕ ಕೆಡಿಪಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸರಕಾರಿ ಕಚೇರಿಗಳಲ್ಲಿ ಬಯೋಮೆಟ್ರಿಕ್ ಪದ್ಧತಿ ಅಳವಡಿಸುವಂತೆ ಸಚಿವರು ಎಲ್ಲ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದರು. ಸಭೆ ನಡೆದು 20 ದಿನಗಳಾದರೂ ಸಹ ಇಲ್ಲಿಯವರೆಗೂ ಶಿಕ್ಷಣ, ಲೋಕೋಪಯೋಗಿ, ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆ, ಆರ್‌ಡಿಪಿಆರ್,




ಕೆಎಸ್‌ಆರ್‌ಟಿಸಿ, ಕಾರ್ಮಿಕ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳಲ್ಲಿ ಅಳವಡಿಸಿಕೊಳ್ಳದೇ ಇರುವುದಕ್ಕೆ ಆಡಳಿತಾಧಿಕಾರಿ ಅಸಮಾಧಾನ ವ್ಯಕ್ತಪಡಿಸಿ, ನಿಮ್ಮ ಇಲಾಖೆಯಲ್ಲಿ ಲಭ್ಯವಿರುವ ಕಾಂಟಿಜೆನ್ಸಿನಲ್ಲಿ ಅವಕಾಶವಿದ್ದು, ಮುಂದಿನ ಸಭೆಯೊಳಗೆ ಎಲ್ಲ ಇಲಾಖೆಗಳಲ್ಲಿಯೂ ಸಹ ಬಯೋಮೆಟ್ರಿಕ್ ಅಳವಡಿಸಿಕೊಳ್ಳುವಂತೆ ಸೂಚನೆ ನೀಡಿದರು.

**ಅಟೆಂಡೆನ್ಸ್‌ಗೆ ಸಹಿ ಮಾಡೋಕೆ ಸಭೆಗೆ ಬರಬೇಡಿ:** ತಾಲೂಕಿನ ಮಜ್ಜೂರು ಕೆರೆ ತುಂಬಿಸುವ ಯೋಜನೆಯ ಪ್ರಗತಿ ಕುರಿತು ಸಣ್ಣ ನೀರಾವರಿ ಇಲಾಖೆಯ ಇಂಜಿನಿಯರ್‌ರನ್ನು ಪ್ರಶ್ನಿಸಿದಾಗ, ಸಮರ್ಪಕವಾಗಿ ಉತ್ತರ ಬರದೇ ಇದ್ದುದಕ್ಕೆ ಅವರನ್ನು ತರಾಟೆಗೆ ತೆಗೆದುಕೊಂಡ ಆಡಳಿತಾಧಿಕಾರಿ, ಮುಂದಿನ ಸಭೆಗೆ ಹಾಜರಾಗುವಾಗ ಸಂಪೂರ್ಣ ಮಾಹಿತಿ ಇದ್ದರೆ ಬನ್ನಿ. ಇಲ್ಲಾಂದ್ರೆ ಬರಬೇಡಿ, ಬರೀ ಅಟೆಂಡೆನ್ಸ್‌ಗೆ ಸಹಿ ಮಾಡೋಕೆ ಸಭೆಗೆ ಬರಬೇಡಿ ಎಂದು ಬಿಸಿ ಮುಟ್ಟಿಸಿದರು.

**ಕಡಕೋಳ ಗ್ರಾಮದಲ್ಲಿ ಸಮರ್ಪಕ ನೀರು ಸಿಗುತ್ತಿಲ್ಲ:** ಕಡಕೋಳ ಗ್ರಾಮದಲ್ಲಿ ಜನತೆಗೆ ಕುಡಿಯಲು ಸಮರ್ಪಕ ನೀರು ಸಿಗುತ್ತಿಲ್ಲ, ಓಎಚ್‌ಟಿಗೆ ನೀರು ಹೋಗುತ್ತಿಲ್ಲ, ಈ ಬಗ್ಗೆ ಬಹಳ ದಿನಗಳಿಂದ ಸಮಸ್ಯೆ ಇದೆ, ಜೆಜೆಎಂ ಕೆಲಸ ಸರಿ ಆಗಿಲ್ಲ, ಗುತ್ತಿಗೆದಾರರು ಸರಿಪಡಿಸಿಲ್ಲ. ಈ ಬಗ್ಗೆ 2 ಬಾರಿ ಸಭೆ ನಡೆಸಿ ಈಗಾಗಲೇ ವರದಿ ಸಲ್ಲಿಸಿದ್ದೇನೆ ಎಂದು ಗ್ರಾ.ಪಂ ಆಡಳಿತಾಧಿಕಾರಿ ಸುರೇಶ ಕುಂಬಾರ ಮಾಹಿತಿ ನೀಡಿದರು. ಇದಕ್ಕೆ ಉತ್ತರಿಸಿದ ಆರ್‌ಡಬ್ಲ್ಯುಎಸ್ ಇಂಜಿನಿಯರ್, ತಾಲೂಕಿನ ಎಲ್ಲ ಗ್ರಾಮಗಳಿಗೂ ಡಿಬಿಓಟಿಯಿಂದ ನೀರು ಸರಬರಾಜಾಗುತ್ತಿದೆ ಎಂದರು. ಶಿರಹಟ್ಟಿ-ಮುಳಗುಂದ ಪಟ್ಟಣಗಳ ಕುಡಿಯುವ ನೀರಿನ ಯೋಜನೆಯನ್ನು ಪುನಃ ಪ್ರಾರಂಭಿಸುವುದಕ್ಕೆ ವರದಿ ನೀಡಲು ನಿಮ್ಮ ಮೇಲಾಧಿಕಾರಿಗಳಿಗೆ ಹೇಳಬೇಕೆಂದು ಆಡಳಿತಾಧಿಕಾರಿ ಸೂಚಿಸಿದರು.

**ತಾಲೂಕಿನಲ್ಲಿ 28ಸಾವಿರ ಹೆಕ್ಟೆರ್ ಬೆಳೆ ಹಾನಿ:** ಶಿರಹಟ್ಟಿ ತಾಲೂಕಿನಲ್ಲಿ 32 ಸಾವಿರ ಹೆ.ಸಾಗುವಳಿ ಕ್ಷೇತ್ರದಲ್ಲಿ 28 ಸಾವಿರ ಹೆ.ಬೆಳೆ ಹಾನಿ ಎಂದು ಗುರುತಿಸಿ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಅಂದಾಜು 186 ಕೋಟಿ ರೂ. ಹಾನಿಯಾಗಿದೆ. ಶೇ.33 ಮಳೆ ▸▸ 3ನೇ ಪುಟಕ್ಕೆ

> ತಾಲೂಕಿನ ಎಲ್ಲ ಅನುಷ್ಠಾನಾಧಿಕಾರಿಗಳಿಗೆ ತಮ್ಮ ಇಲಾಖೆಯಲ್ಲಿಯ ಮಂಜೂರಾದ ಹುದ್ದೆ, ಖಾಲಿ ಹುದ್ದೆ, ಭರ್ತಿ ಹುದ್ದೆ ಹೀಗೆ ಮೂಲಭೂತ ಸೌಲಭ್ಯಗಳ ಕುರಿತು ಸಂಪೂರ್ಣ ಮಾಹಿತಿ ಇರಬೇಕು. ಸಭೆಯಲ್ಲಿ ಕಾಲಹರಣ ಮಾಡಬಾರದು. ಸಭೆಯ ಗಂಭೀರತೆಯನ್ನು ಎಲ್ಲರೂ ಅರಿತುಕೊಳ್ಳಬೇಕು. ಅಂಕಿ-ಸಂಖ್ಯೆಗಳ ಸಮೇತ ಸಭೆಗೆ ಹಾಜರಾಗಬೇಕು. ಇದನ್ನು ಎಲ್ಲರೂ ರೂಢಿಸಿಕೊಳ್ಳಬೇಕು ಎಂದು ಆಡಳಿತಾಧಿಕಾರಿ ಎ.ಎ ಕಂಬಾಳಿಮಠ ಸೂಚಿಸಿದರು.

## ಗಣೇಶ ಹಬ್ಬದ ನಿಮಿತ್ತ ಮದ್ಯ ಮಾರಾಟ ನಿಷೇಧ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲೆಯಾದ್ಯಂತ ಸೆಪ್ಟೆಂಬರ್ 19 ರಿಂದ ಗಣೇಶ ಹಬ್ಬ ಆಚರಿಸಲಾಗುತ್ತಿದೆ. ಜಿಲ್ಲೆಯಾದ್ಯಂತ ಸಾರ್ವಜನಿಕ ಸ್ಥಳಗಳಲ್ಲಿನ ಪ್ರತಿಷ್ಠಾಪಿತ ಗಣೇಶ ಮೂರ್ತಿಗಳನ್ನು 5,7,9,11 ನೇ ದಿನಗಳಿಗೆ ಆಯಾ ಸಂಘಟಕರು/ಸಾರ್ವಜನಿಕರು ಮೆರವಣಿಗೆ ಮೂಲಕ ಸ್ಥಳೀಯ ಆಡಳಿತ ನಿಗದಿಪಡಿಸಿದ ಸ್ಥಳಗಳಲ್ಲಿ ವಿಸರ್ಜನೆ ಕಾರ್ಯಕ್ರಮಗಳು ಜರುಗುತ್ತವೆ.

ಸದರಿ ದಿನಾಂಕಗಳಂದು ಜಿಲ್ಲೆಯಲ್ಲಿ ಶಾಂತಿ, ಸುವ್ಯವಸ್ಥೆ, ಕಾಪಾಡುವ ಹಿತದೃಷ್ಟಿಯಿಂದ ಸಂಬಂಧಪಟ್ಟ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಕೆಳಗಿನಂತೆ ಮದ್ಯ ಸಾಗಾಟ ಮತ್ತು ಮದ್ಯ ಮಾರಾಟ ನಿಷೇಧಿಸಲಾಗಿದೆ.



ಗದಗ ಶಹರ ಹಾಗೂ ಗದಗ ತಾಲೂಕು ವ್ಯಾಪ್ತಿಯಲ್ಲಿ ಸೆಪ್ಟೆಂಬರ್ 22ರ ಮಧ್ಯರಾತ್ರಿಯಿಂದ ಸೆಪ್ಟೆಂಬರ್ 24 ರ ಬೆಳಗಿನ 6 ಗಂಟೆಯವರೆಗೆ, ಸೆಪ್ಟೆಂಬರ್ 26ರ ಮಧ್ಯರಾತ್ರಿಯಿಂದ ಸೆ. 28ರ ಬೆಳಗಿನ 6 ಗಂಟೆಯವರೆಗೆ, ಸೆಪ್ಟೆಂಬರ್ 28 ರ ಮಧ್ಯರಾತ್ರಿಯಿಂದ ಸೆಪ್ಟೆಂಬರ್ 30 ರ ಬೆಳಗಿನ 6 ಗಂಟೆಯವರೆಗೆ.

ಲಕ್ಷ್ಮೇಶ್ವರ ಮತ್ತು ಶಿರಹಟ್ಟಿ ತಾಲೂಕು ವ್ಯಾಪ್ತಿಯಲ್ಲಿ ಸೆಪ್ಟೆಂಬರ್ 21ರ ಮಧ್ಯರಾತ್ರಿಯಿಂದ ಸೆ. 23ರ ಬೆ 6 ಗಂಟೆಯವರೆಗೆ, ಸೆ.23ರ ಮಧ್ಯರಾತ್ರಿಯಿಂದ ಸೆ. 25ರ ಬೆಳಗಿನ 6 ಗಂಟೆಯವರೆಗೆ, ಸೆ.25ರ ಮಧ್ಯರಾತ್ರಿಯಿಂದ ಸೆ.27ರ ಬೆಳಗಿನ 6 ಗಂಟೆಯವರೆಗೆ, ರೋಣ ಹಾಗೂ ಗಜೇಂದ್ರಗಡ ತಾಲೂಕು ವ್ಯಾಪ್ತಿಯಲ್ಲಿ ಸೆಪ್ಟೆಂಬರ್ 21ರ ಮಧ್ಯರಾತ್ರಿಯಿಂದ ಸೆ.23ರ ಬೆ 6 ಗಂಟೆಯವರೆಗೆ, ಸೆ.23ರ ಮಧ್ಯರಾತ್ರಿಯಿಂದ ಸೆ 25 ರ ಬೆಳಗಿನ 6 ಗಂಟೆಯವರೆಗೆ, ಸೆಪ್ಟೆಂಬರ್ 28ರ ಮಧ್ಯರಾತ್ರಿಯಿಂದ ಸೆ 30ರ ಬೆಳಗಿನ 6 ಗಂಟೆಯವರೆಗೆ.

ನರಗುಂದ ತಾಲೂಕು ವ್ಯಾಪ್ತಿಯಲ್ಲಿ ಸೆಪ್ಟೆಂಬರ್ 21ರ ಮಧ್ಯರಾತ್ರಿಯಿಂದ ಸೆ.23 ರ ಬೆ 6 ಗಂಟೆಯವರೆಗೆ, ಸೆ.25 ರ ಮಧ್ಯರಾತ್ರಿಯಿಂದ ಸೆ.27ರ ಬೆಳಗಿನ 6 ಗಂಟೆಯವರೆಗೆ, ಸೆ 27ರ ಮಧ್ಯರಾತ್ರಿಯಿಂದ ಸೆ. 29ರ ಬೆಳಗಿನ 6 ಗಂಟೆಯವರೆಗೆ.

ಮುಂಡರಗಿ ತಾಲೂಕಿನ ವ್ಯಾಪ್ತಿಯಲ್ಲಿ ಸೆಪ್ಟೆಂಬರ್ 21ರ ಮಧ್ಯರಾತ್ರಿಯಿಂದ ಸೆಪ್ಟೆಂಬರ್ 23ರ ಬೆಳಗಿನ 6 ಗಂಟೆಯವರೆಗೆ, ಸೆಪ್ಟೆಂಬರ್ 23ರ ಮಧ್ಯರಾತ್ರಿಯಿಂದ ಸೆ.25ರ ಬೆ 6 ಗಂಟೆಯವರೆಗೆ, ಸೆಪ್ಟೆಂಬರ್ 25ರ ಮಧ್ಯರಾತ್ರಿಯಿಂದ ಸೆಪ್ಟೆಂಬರ್ 27ರ ಬೆ 6 ಗಂಟೆಯವರೆಗೆ ಮದ್ಯ ಸಾಗಾಟ ಮತ್ತು ಮದ್ಯ ಮಾರಾಟ ನಿಷೇಧಿಸಲಾಗಿದೆ.

ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸದರ ದಿನಗಳಂದು ಯಾವತ್ತೂ ಬಾರುಗಳು, ಕ್ಲಬ್ಬುಗಳು ಬಿಯರ್, ಭಾರತೀಯ ತಯಾರಿಕೆಯ ಮದ್ಯದ ಅಂಗಡಿಗಳನ್ನು ಮೇಲ್ಕಾಣಿಸಿದ ಅವಧಿಯಲ್ಲಿ ಮುಚ್ಚತಕ್ಕದ್ದು. ಅಲ್ಲದೇ ಪರಿಸ್ಥಿತಿಗೆ ಅನುಗುಣವಾಗಿ ಸಾರ್ವಜನಿಕ ಶಾಂತತೆಯನ್ನು ಕಾಯ್ದುಕೊಳ್ಳುವ ದೃಷ್ಟಿಯಿಂದ ವಲಯ ಅಬಕಾರಿ ಇನ್ಸ್‌ಪೆಕ್ಟರ್ ಹಾಗೂ ಅಬಕಾರಿ ಉಪ-ಆಯುಕ್ತರು, ಕರ್ನಾಟಕ ಅಬಕಾರಿ ಕಾಯ್ದೆಯನ್ವಯ ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾ ದಂಡಾಧಿಕಾರಿಗಳಾದ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಆದೇಶಿಸಿದ್ದಾರೆ.

## ವಸತಿ ನಿಲಯ ಪ್ರವೇಶಕ್ಕೆ ಅರ್ಜಿ ಸಲ್ಲಿಸಲು ಅವಧಿ ವಿಸ್ತರಣೆ

■ ವಿಜಯಸಾಕ್ಷಿ ಸುದ್ದಿ, ಗದಗ

2023-24ನೇ ಸಾಲಿಗೆ ಗದಗ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಅರ್ಹ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗದ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಂದ ವಸತಿ ನಿಲಯ ಪ್ರವೇಶಕ್ಕೆ ಇಂಜಿನಿಯರಿಂಗ್, ಮೆಡಿಕಲ್, ಬಿಎಡ್ ಹಾಗೂ ಪ್ಯಾರಾಮೆಡಿಕಲ್ ಕೋರ್ಸ್ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿಲಾಗಿದ್ದು, ಅರ್ಜಿ ಸಲ್ಲಿಸಲು ಕೊನೆಯ ದಿನವನ್ನು ಅಕ್ಟೋಬರ್ 16 ರವರೆಗೆ ವಿಸ್ತರಿಸಲಾಗಿದೆ.

ಪ್ರವೇಶ ಬಯಸುವ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಕಡ್ಡಾಯವಾಗಿ www.sw.kar.nic.in ವೆಬ್‌ಸೈಟ್‌ನಲ್ಲಿ 2023-24ನೇ ಸಾಲಿನಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯ ಪ್ರವೇಶಕ್ಕೆ ಆನ್‌ಲೈನ್ ಅರ್ಜಿ ಎಂಬ ಲಿಂಕ್‌ನಡಿ S.H.P ( State Hostel Portal ) ಮೂಲಕ ವಿದ್ಯಾರ್ಥಿಗಳು ಖಾತೆ ಸೃಜಿಸಿದ ನಂತರ ಮೆಟ್ರಿಕ್ ನಂತರದ ವಸತಿ ನಿಲಯಕ್ಕೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಆಯಾ ತಾಲೂಕಿನ ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಗದಗ ಇವರಿಗೆ ಸಂಪರ್ಕಿಸಬಹುದಾಗಿದೆ. ಇವರ ಈ ಕೆಳಗಿನಂತಿದೆ.

ಗದಗ ತಾಲೂಕಿನ ಸಹಾಯಕ ನಿರ್ದೇಶಕರ ಕಚೇರಿ ಸಮಾಜ ಕಲ್ಯಾಣ ಇಲಾಖೆ, ಗದಗ 08372-297258/9480843128. ರೋಣ ತಾಲೂಕಿನ ಸಹಾಯಕ ನಿರ್ದೇಶಕರ ಕಚೇರಿ ಸಮಾಜ ▸▸ 3ನೇ ಪುಟಕ್ಕೆ

### ಕೆಸಿಸಿ ಬ್ಯಾಂಕ್ ನಿರ್ದೇಶಕ ಸ್ಥಾನಕ್ಕೆ ಐ.ಎಸ್ ಪಾಟೀಲರಿಂದ ನಾಮಪತ್ರ ಸಲ್ಲಿಕೆ

## ಸರ್ಕಾರದ ನೆರವಿನೊಂದಿಗೆ ಸಹಕಾರಿ ಸಂಘಗಳ ಉತ್ತೇಜನ



■ ವಿಜಯಸಾಕ್ಷಿ ಸುದ್ದಿ, ರೋಣ

ಸಹಕಾರಿ ಸಂಘಗಳ ಬೆಳವಣಿಗೆಯೊಂದಿಗೆ ರೈತರ ಹಿತವೂ ನನಗೆ ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ನಾನು ಕೆಲಸ ಮಾಡಿಕೊಂಡು ಬಂದಿದ್ದೇನೆ ಎಂದು ಕೆಸಿಸಿ ಬ್ಯಾಂಕ್ ನಿರ್ದೇಶಕ ಐ.ಎಸ್ ಪಾಟೀಲ ಹೇಳಿದರು.

ಅವರು ಗುರುವಾರ ಧಾರವಾಡ ಕೆಸಿಸಿ ಬ್ಯಾಂಕ್ ನಿರ್ದೇಶಕ ಸ್ಥಾನದ ಉಮೇದುವಾರಿಕೆ ಬಯಸಿ ನಾಮಪತ್ರ ಸಲ್ಲಿಸಿ ಮಾತನಾಡಿದರು.

ಕೆಸಿಸಿ ಬ್ಯಾಂಕ್ ಅಧ್ಯಕ್ಷನಾಗಿ, ನಿರ್ದೇಶಕನಾಗಿ, ಬೀಜ ನಿಗಮದ ಸದಸ್ಯನಾಗಿ ರೈತರಿಗೆ ಉಪಯುಕ್ತವಾದ ಹಾಗೂ ರೈತರ ಬೆಳವಣಿಗೆಗೆ ಸಹಕಾರಿಯಾದ ಯೋಜನೆಗಳನ್ನು ತಲುಪಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ. ರೈತರ ಜೊತೆಗೆ ಉತ್ತಮ ಒಡನಾಟ ಹಾಗೂ ಸಹಕಾರಿ ಸಂಘಗಳ ಬೆಳವಣಿಗೆಗೆ ನನ್ನ ಪ್ರಾಮಾಣಿಕ ಪ್ರಯತ್ನವೇ ನನ್ನ ಸತತ ಗೆಲುವಿಗೆ ಕಾರಣವಾಗಿದ್ದು, ಈ ಬಾರಿಯೂ ರೈತ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿ ಬೆಂಬಲಿಸಿ ನನ್ನನ್ನು ಗೆಲ್ಲಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸಹಕಾರಿ ಸಂಘಗಳು ರೈತರ ಜೊತೆಗೆ ಉತ್ತಮ ಸಂಬಂಧವನ್ನು ಹೊಂದುವ ▸▸ 3ನೇ ಪುಟಕ್ಕೆ

## ವಿದ್ಯಾರ್ಥಿ ವೇತನ ಮಂಜೂರಾತಿಗಾಗಿ ಅರ್ಜಿ ಸಲ್ಲಿಸಲು ಅವಕಾಶ

■ ವಿಜಯಸಾಕ್ಷಿ ಸುದ್ದಿ, ಗದಗ

2023-24ನೇ ಸಾಲಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಮೆಟ್ರಿಕ್ ಪೂರ್ವ 1 ರಿಂದ 10ನೇ ತರಗತಿ ವಿದ್ಯಾರ್ಥಿ/ವಿದ್ಯಾರ್ಥಿನಿಯರ ವಿದ್ಯಾರ್ಥಿ ವೇತನ ಮಂಜೂರಾತಿಗಾಗಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ಸದರಿ ಯೋಜನೆಯಡಿ ಈ ಹಿಂದಿನ ಸಾಲಿನಲ್ಲಿ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳು ಪ್ರಸಕ್ತ ಸಾಲಿನಲ್ಲಿ ಅರ್ಜಿ ಸಲ್ಲಿಸುವಂತಿಲ್ಲ ಹಾಗೂ ಈ ಹಿಂದೆ ಅರ್ಜಿ ಸಲ್ಲಿಸದಿರುವ ಮತ್ತು 2023-24ನೇ ಸಾಲಿನಲ್ಲಿ ಹೊಸ ವಿದ್ಯಾರ್ಥಿಗಳು ಮಾತ್ರ ಅರ್ಜಿ ಸಲ್ಲಿಸತಕ್ಕದ್ದು.

ವಿದ್ಯಾರ್ಥಿವೇತನ ಸೌಲಭ್ಯವನ್ನು ಪಡೆಯಲು ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ಇಲಾಖೆಯ https://ssp.karnataka.gov.in ಅಥವಾ www.sw.kar.nic.in ಲಿಂಕ್‌ನಡಿ ಅರ್ಜಿಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಆಯಾ ತಾಲೂಕಿನ ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ.

## ಶಿರಹಟ್ಟಿ ತಾಲೂಕಾ ಮಟ್ಟದ ಎಸ್‌ಸಿಪಿ /ಟಿಎಸ್‌ಪಿ ಸಭೆ

■ ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ತಾಲೂಕಿನ ಎಲ್ಲ ಇಲಾಖೆಗಳ ಅಧಿಕಾರಿಗಳು ತಮ್ಮ ಇಲಾಖೆಗಳಲ್ಲಿ ಎಸ್‌ಸಿಪಿ/ಟಿಎಸ್‌ಪಿ ಯೋಜನೆಯಡಿ ಬಂದ ಅನುದಾನವನ್ನು ಸದುಪಯೋಗಪಡಿಸಬೇಕು. ಯಾವುದೇ ಕಾರಣಕ್ಕೂ ಅನುದಾನ ಲ್ಯಾಪ್ಸ್ ಆಗದಂತೆ ಕ್ರಮ ವಹಿಸಬೇಕೆಂದು ಶಿರಹಟ್ಟಿ ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ಎನ್.ಎಚ್ ಓಲೇಕಾರ ಹೇಳಿದರು.

ಅವರು ಗುರುವಾರ ತಾ.ಪಂ ಸಭಾಭವನದಲ್ಲಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಜರುಗಿದ ತಾಲೂಕಾ ಮಟ್ಟದ ಎಸ್‌ಸಿಪಿ/ಟಿಎಸ್‌ಪಿ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.




ಎಸ್‌ಸಿ/ಎಸ್‌ಟಿ ಸಮುದಾಯದ ಏಳಿಗೆಗಾಗಿ ಬಂದ ಅನುದಾನವನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸುವ ಗುರುತರವಾದ ಜವಾಬ್ದಾರಿ ಅಧಿಕಾರಿಗಳ ಮೇಲಿದೆ. ವಿಳಂಬ ಮಾಡದೇ, ಸರಕಾರದ ಮಾರ್ಗಸೂಚಿ ಮತ್ತು ನಿಯಮಾನುಸಾರ ಅರ್ಹ ಫಲಾನುಭವಿಗಳಿಗೆ ಸರಕಾರ ಕೊಡಮಾಡುವ ಸೌಲಭ್ಯವನ್ನು ತಲುಪಿಸಬೇಕು. ಹಾಗೂ ಯೋಜನೆಯಡಿ ವಿವಿಧ ಅಭಿವೃದ್ಧಿ ಕೆಲಸಗಳನ್ನು ಸಹ ತ್ವರಿತ ಗತಿಯಲ್ಲಿ ಮುಗಿಸಬೇಕೆಂದು ಹೇಳಿದರು.

ಸಮಿತಿ ಸದಸ್ಯ ಕಾರ್ಯದರ್ಶಿ ಹಾಗೂ ಸಮಾಜ ಕಲ್ಯಾಣಾಧಿಕಾರಿ ಎಸ್.ಬಿ ಕುಲಕರ್ಣಿ, ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಓಪಿಎಸ್ ಜಾರಿಗೆ ಆಗ್ರಹಿಸಿ ಭಾರತ ಯಾತ್ರೆ ರ‍್ಯಾಲಿ ಇಂದು

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಎನ್‌ಪಿಎಸ್ ಯೋಜನೆಯನ್ನು ಕೈಬಿಟ್ಟು, ಮತ್ತೆ ಓಪಿಎಸ್ ಜಾರಿಗೆ ತರಬೇಕು ಎಂದು ಒತ್ತಾಯಿಸಿ ಅಖಿಲ ಭಾರತ ಪ್ರಾಥಮಿಕ ಶಿಕ್ಷಕರ ಫೆಡರೇಶನ್ ವತಿಯಿಂದ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಹೊರಡಲಿರುವ ರ‍್ಯಾಲಿಯ ನಿಮಿತ್ತ ಸೆ.22ರಂದು ಮಧ್ಯಾಹ್ನ 2 ಗಂಟೆಗೆ ಲಕ್ಷ್ಮೇಶ್ವರದ ಸೋಮೇಶ್ವರ ದೇವಸ್ಥಾನದಿಂದ ಪಟ್ಟಣದ ಚೆನ್ನಮ್ಮನ ವನದವರೆಗೆ ಬೈಕ್ ರಾಲಿ ನಡೆಯಲಿದೆ ಎಂದು



ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕಾಧ್ಯಕ್ಷ ಬಿ.ಎಸ್ ಹರ್ಲಾಪೂರ ಮತ್ತು ಪ್ರಧಾನ ಕಾರ್ಯದರ್ಶಿ ಚಂದ್ರು ನೇಕಾರ ತಿಳಿಸಿದ್ದಾರೆ.

ಈ ಕುರಿತು ಹೇಳಿಕೆ ನೀಡಿರುವ ಅವರು, ರಾಷ್ಟ್ರವ್ಯಾಪಿ ಏಕರೂಪ ವೇತನ ಶ್ರೇಣಿ ಜಾರಿಗೆ ತರಬೇಕು, ಎನ್‌ಇಪಿಯಲ್ಲಿನ ಶಿಕ್ಷಕರ, ವಿದ್ಯಾರ್ಥಿಗಳ ವಿರೋಧಿ ನೀತಿಯನ್ನು ಕೈಬಿಡಬೇಕು ಎಂದು ಸರ್ಕಾರಕ್ಕೆ ಒತ್ತಾಯಿಸಲಾಗುವುದು. ಹೀಗಾಗಿ ಬೃಹತ್ ರಾಲಿಗೆ ಎನ್‌ಪಿಎಸ್ ನೌಕರರು ಮತ್ತು ಸರ್ಕಾರಿ ನೌಕರರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಮನವಿ ಮಾಡಿದ್ದಾರೆ.

## ಸಾಕ್ಷಿ ಸುಭಾಷಿತ

ನಾನು, ನನ್ನದು ಎಂಬುದೇ ಅಜ್ಞಾನ. ಹೇ, ಭಗವಂತ ನೀನೇ ಕರ್ತ, ಎಲ್ಲವೂ ನಿನಗೆ ಸೇರಿದೆ ಎಂದು ಭಾವಿಸುವುದೇ ಜ್ಞಾನದ ಚಿನ್ಹೆ.

-ಶ್ರೀ ರಾಮಕೃಷ್ಣ ವಚನ ವೇದ

## ಸಂಪಾದಕೀಯ

# ಕಾವೇರಿ: ಸರ್ಕಾರಕ್ಕೆ ಅಗ್ನಿಪರೀಕ್ಷೆ

ಕಾವೇರಿ ನದಿ ನೀರು ಹಂಚಿಕೆ ವಿಷಯ ಸುಪ್ರೀಂ ಕೋರ್ಟ್ ಅಂಗಳಕ್ಕೆ ಹೋದರು, ಕರ್ನಾಟಕದ ಮನವಿಗೆ ಬೆಲೆ ಸಿಗದಂತಾಗಿದೆ. ಮುಂದಿನ ಹದಿನೈದು ದಿನಗಳವರೆಗೆ ಕಾವೇರಿ ನದಿ ನೀರು ನಿರ್ವಹಣಾ ಸಮಿತಿಯ ಆದೇಶವನ್ನು ಪಾಲನೆ ಮಾಡುವಂತೆ ಸುಪ್ರೀಂ ಕೋರ್ಟ್ ನೀಡಿರುವ ಆದೇಶ ರಾಜ್ಯಕ್ಕೆ ಮತ್ತೊಂದು ಬರ ಎದುರಾಗಿದೆ.

ಕಾವೇರಿ ನದಿ ನೀರು ಹಂಚಿಕೆಯ ವಿಷಯದಲ್ಲಿ ಕರ್ನಾಟಕ ರಾಜ್ಯ ಸರ್ಕಾರ ತೋರಿದ ಅಸಡ್ಡೆಯಿಂದಾಗಿ ಇವತ್ತು ಸುಪ್ರೀಂ ಕೋರ್ಟ್‌ನಲ್ಲಿಯೂ ಹಿನ್ನಡೆ ಅನುಭವಿಸುವಂತಾಗಿದೆ. ಕಾವೇರಿ ನದಿ ನೀರು ನಿರ್ವಹಣಾ ಸಮಿತಿ ಸೂಚನೆ ಬರುತ್ತಿದ್ದಂತೆ ಎಚ್ಚೆತ್ತುಕೊಳ್ಳಬೇಕಾದ ರಾಜ್ಯ ಸರಕಾರ, ಕೇವಲ ರಾಜಕೀಯದಲ್ಲಿ ಮುಳುಗಿದ್ದರಿಂದ ಇವತ್ತು ಮತ್ತೊಂದು ಸಂಕಷ್ಟ ಎದುರಿಸಬೇಕಾಗಿದೆ.

ಕಾವೇರಿ ವಿಷಯದಲ್ಲಿ ರಾಜ್ಯದ ವಕೀಲರು ಸಮರ್ಥವಾದ ಮಂಡಿಸಿ ಯಶಸ್ವಿಯಾಗುವಲ್ಲಿ ಮತ್ತೊಮ್ಮೆ ಎಡವಿದ್ದಾರೆ. ಇದಕ್ಕೆ ರಾಜ್ಯ ಸರ್ಕಾರದ ಪಾಲು ಸಾಕಷ್ಟಿದೆ. ಸಾಕಷ್ಟು ತಯಾರಿ ಮಾಡಿಕೊಳ್ಳದೆ ಸುಪ್ರೀಂ ಕೋರ್ಟ್ ಅಂಗಳಕ್ಕೆ ಹೋಗಿದ್ದು ಬಹುದೊಡ್ಡ ತಪ್ಪು ಎನ್ನುವುದು ಜನಸಾಮಾನ್ಯರ ಅಭಿಪ್ರಾಯವಾಗಿದೆ.

ಕರ್ನಾಟಕದ ಅಣೆಕಟ್ಟುಗಳಲ್ಲಿರುವ ನೀರಿನ ಪ್ರಮಾಣದ ಜೊತೆಗೆ ತಮಿಳುನಾಡಿನಲ್ಲಿರುವ ನೀರಿನ ಬಗ್ಗೆ ಸಮರ್ಥವಾಗಿ ಸುಪ್ರೀಂಕೋರ್ಟಿಗೆ ಮನವರಿಕೆ ಮಾಡಿಕೊಳ್ಳುವಲ್ಲಿ ರಾಜ್ಯ ವಿಫಲವಾಗಿದೆ.

ಸರ್ಕಾರದ ಅನೇಕ ಮಂತ್ರಿಗಳು ತಮಿಳುನಾಡಿನಲ್ಲಿರುವ ಜಲಮೂಲಗಳ ಸಮಗ್ರ ಮಾಹಿತಿಯನ್ನ ಜನರ ಮುಂದಿಟ್ಟು, ಕಾವೇರಿ ವಿವಾದಕ್ಕೆ ರಾಜಕೀಯ ಪರಿಹಾರ ಬೇಕು ಎಂದು ಆಗ್ರಹಿಸುತ್ತಾರೆ. ಆದರೆ ಇದೇ ವಿಷಯವನ್ನು ಕೋರ್ಟ್‌ನ ಗಮನಕ್ಕೆ ತಂದು, ನೀರು ಉಳಿಸಿಕೊಳ್ಳುವ ಪ್ರಯತ್ನ ಮಾಡುವುದಿಲ್ಲ.

ಸುಪ್ರೀಂ ಕೋರ್ಟ್‌ನಲ್ಲಿ ಸದ್ಯಕ್ಕೆ ಹಿನ್ನಡೆಯಾಗಿದೆ. ರಾಜ್ಯ ಸರ್ಕಾರಕ್ಕೆ ಇದೊಂದು ಅಗ್ನಿಪರೀಕ್ಷೆ. ಅಧಿಕಾರ ಉಳಿಸಿಕೊಳ್ಳುವುದೇ ಸರಕಾರದ ಉದ್ದೇಶವಾದರೆ 15 ದಿನಗಳ ಕಾಲ ನೀರು ಹರಿಸಬೇಕು. ಅಧಿಕಾರ ಹೋದರು ನೀರು ಬಿಡುವುದಿಲ್ಲ ಎಂದು ಪಟ್ಟು ಹಿಡಿದು ಸುಪ್ರೀಂ ಕೋರ್ಟ್ ಆದೇಶವನ್ನು ಧಿಕ್ಕರಿಸಬೇಕು. ಸರ್ಕಾರ ಯಾವುದನ್ನು ಆಯ್ದುಕೊಳ್ಳುತ್ತದೆ ಎನ್ನುವುದರ ಮೇಲೆ ಸರಕಾರದ ಇಚ್ಛಾಶಕ್ತಿ ಸ್ಪಷ್ಟವಾಗಲಿದೆ.



ಮುಂಡರಗಿ ಪಟ್ಟಣದ ಗಾಂಧಿ ಸರ್ಕಲ್‌ನಲ್ಲಿ ಶ್ರೀ ವಿನಾಯಕ ತರುಣ ಸಂಘದಿಂದ ಪ್ರತಿಷ್ಠಾಪನೆಗೊಂಡಿರುವ ಗಜಾನನ.



ಗದಗ ನಗರದ ಶ್ರೀ ಪಂಚಾಕ್ಷರಿ ಗವಾಯಿಗಳ ಪ್ರಾಂಗಣ, ಎಪಿಎಂಸಿಯಾರ್ಡ್‌ನಲ್ಲಿ ಗಜಾನನ ಉತ್ಸವ ಸಮಿತಿಯ ವತಿಯಿಂದ ಪ್ರತಿಷ್ಠಾಪಿಸಲಾಗಿರುವ ವಿಘ್ನ ವಿನಾಯಕ ಮತ್ತು ಇಸ್ರೋ ಚಂದ್ರ ಯಾನ-3ರ ಮಾದರಿ ಭಕ್ತಾದಿಗಳ ಗಮನ ಸೆಳೆಯುತ್ತಿದೆ.

## ನೀವೂ ನಮ್ಮ ಜೊತೆ ಕೈಜೋಡಿಸಿ

### 'ವಿಜಯಸಾಕ್ಷಿ'

ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.

ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..

ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.


E-mail: vijayasakshidaily@gmail.com

ಮೊ : 9019256545

---

## ಸೆ.20ರಿಂದ 24ರವರೆಗೆ ಸಿರಿಗೆರೆಯಲ್ಲಿ ಶ್ರೀ ಶಿವಕುಮಾರ ಶಿವಾಚಾರ್ಯ ಶ್ರೀಗಳಿಗೆ ಭಕ್ತರ ನಮನ

# ಭಕ್ತರ ಬಾಳಿನ ನಂದಾದೀಪ



ತರಳಬಾಳು ಸದ್ಧರ್ಮ ಪೀಠಕ್ಕೆ ಒಂದು ದೈವಿಶಕ್ತಿ ಇದೆ. ಈ ಪೀಠವನ್ನು ಅಲಂಕರಿಸುವವರು ಸಮಾಜದ ಒಳಿತಿಗಾಗಿ ಹಾಗೂ ಭಕ್ತರ ಸರ್ವೋದ್ಧಾರಕ್ಕಾಗಿ ಹಗಲಿರುಳು ಶ್ರಮಿಸುವ ಶ್ರೀಗಳದ್ದು ಅಪರೂಪದ ವ್ಯಕ್ತಿತ್ವವಾಗಿದೆ. ಶತ್ರುವನ್ನೂ ಮಿತ್ರನಾಗಿಸುವ ಮಹಾನ್ ಶಕ್ತಿ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರಿಗೆ ಇತ್ತು. ಸಿರಿಗೆರೆಯ ಶ್ರೀ ತರಳಬಾಳು ಮಠ ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಜನಾಂಗದವರಿಗೆ ಶಿಕ್ಷಣ, ಉದ್ಯೋಗ, ಸಹಪಂಕ್ತಿ ಭೋಜನ, ಸರ್ವರಿಗೆ ಸಮಪಾಲು-ಸಮಬಾಳು ಎನ್ನುವ ಮಾತನ್ನು ಶ್ರೀಗಳವರು ಪಾಲಿಸುತ್ತಿದ್ದರು.

ಹಿರಿಯ ಗುರುಗಳ ಕಾಲದಲ್ಲಿ 'ಸಿರಿಗೆರೆ ಸ್ವಾಮಿಗಳು ಸೀನಿದರೆ ವಿಧಾನಸೌಧ ನಡುಗುತ್ತಿತ್ತು' ಎಂಬ ಮಾತು ಜನಜನಿತವಾಗಿದೆ. ಅದರಂತೆ ಇಂದಿನ ಶ್ರೀಗಳ ಆಶೀರ್ವಾದದ ಫಲದಿಂದ ಯಾವುದೇ ಪಕ್ಷದ ಸರಕಾರವಿರಲಿ, ನೀರಾವರಿ ಯೋಜನೆಗಳು ಜಾರಿಯಾಗಿ ನದಿಗಳಿಂದ ನೀರು ಹರಿದು ಕೆರೆಗಳು ತುಂಬುತ್ತಿವೆ. ರೈತರ ಬಾಳಿನಲ್ಲಿ ಬೆಳಕಾಗಿದ್ದಾರೆ ಡಾ. ಶ್ರೀ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು. ಡಾ ಶ್ರೀಗಳು ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರ ಆಶಯದಂತೆ ಜಗದ್ಗುರುವಾದವರು ಜಗತ್ತನ್ನೇ ಸುತ್ತಿ ಬರಬೇಕು ಎನ್ನುವ ಆಶಯದೊಂದಿಗೆ ದೇಶವಿದೇಶಗಳಲ್ಲಿ ವಚನ ಸಾಹಿತ್ಯವನ್ನು ಪ್ರಚಾರ ಮಾಡಿದರು. ಭಕ್ತರ ಹೃದಯದಲ್ಲಿ ಭಕ್ತಿಯ ದೀಪ ಹಚ್ಚಿದ ಮಹಾಗುರುಗಳು. ಅಂದು ಹಚ್ಚಿದ ದೀಪಗಳು ಇಂದು ನಾಡಿನೆಲ್ಲೆಡೆ ಪ್ರಕಾಶಮಾನವಾಗಿ ಪ್ರಜ್ವಲಿಸುತ್ತಿವೆ.

ಸಿರಿಗೆರೆಯ ತರಳಬಾಳು ಪೀಠ ಅಲಂಕರಿಸಿದ ಶ್ರೀಗಳು ಅಧಿಕಾರ ಎಂಬುದು ಬೆಂಕಿಯ ಉಂಡೆ ಹಾಗೆ ಎಂದು ತಿಳಿದುಕೊಂಡು ಅದರ ಮೇಲೆ ಕುಳಿತುಕೊಂಡಿದ್ದವರು. ಭಕ್ತರ ಭಕ್ತಿಯೇ ಶ್ರೀಮಠದ ಶಕ್ತಿ. ಶ್ರೀ ತರಳಬಾಳು ಸದ್ಧರ್ಮ ಪೀಠವನ್ನು ವಿಶ್ವವಿಖ್ಯಾತಿಗೊಳಿಸಿದ ಮಹಾನ್ ಚೇತನ. ಹಿರಿಯ ಗುರುಗಳು ಭಕ್ತರಿಗೆ ನೋವಾಗದಿರಲಿ, ಭಕ್ತರು ನಿರೋಗಿಗಳಾಗಿರಲಿ, ಎಲ್ಲಾ ಭಕ್ತರಿಗೂ ಯಾವಾಗಲೂ ಒಳ್ಳೆಯದಾಗಲಿ, ಯಾವ ಭಕ್ತನೂ ದುಃಖವನ್ನು ಕಾಣದಿರಲಿ ಎಂಬ ಅಪಾರವಾದ ಕಳಕಳಿ ಇತ್ತು. ಪೂಜ್ಯರು ಯಾವುದೇ ಭಕ್ತರ ಮನೆಗೆ ಹೋದರೂ ಅವರ ಮನೆಯ ಕುಟುಂಬಸ್ಥರ ಬಗೆಗೆ ವಿಚಾರಿಸುತ್ತಿದ್ದರು.

ಶ್ರೀಗಳು ತರಳಬಾಳು ವಿದ್ಯಾಸಂಸ್ಥೆ ಕಟ್ಟಿ ವಿದ್ಯಾಸಂಸ್ಥೆಯಲ್ಲಿ ಓದಿದ ವಿದ್ಯಾರ್ಥಿಗಳು ಇಂದು ಎಲ್ಲಾ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಹಾಗೆಯೇ ಇತ್ತೀಚಿನ ದಿನಗಳಲ್ಲಿ ಇಸ್ರೋ ಬಾಹ್ಯಾಕಾಶ ಕೇಂದ್ರದಲ್ಲಿ ಕಾರ್ಯನಿರ್ವಹಿಸಿ ಯಶಸ್ವಿಯಾದ ತರಳಬಾಳು ಸಂಸ್ಥೆಯಲ್ಲಿ ಓದಿದ ಮೂವರು ವಿದ್ಯಾರ್ಥಿಗಳು ಇದ್ದಾರೆ. ಅದರಲ್ಲಿ ಶ್ರೀ ಗುರು ಮುದುಕೇಶ್ವರ ಪ್ರೌಢಶಾಲೆ, ಕಲಕೇರಿ ಗ್ರಾಮದ ಒಬ್ಬ ವಿದ್ಯಾರ್ಥಿಯೂ ಆಗಿದ್ದರು ಎಂಬುದು ಹೆಮ್ಮೆಯ ವಿಷಯ. ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರ ಕನಸಿನ ಕೂಸು ಗ್ರಾಮೀಣ ಪ್ರದೇಶದ ಪ್ರೌಢಶಾಲೆಗಳು. ಪ್ರೌಢಶಾಲೆಯಲ್ಲಿ ಓದಿದ ಇಬ್ಬರು ವಿದ್ಯಾರ್ಥಿಗಳು ಚಂದ್ರಯಾನದ-3 ಯೋಜನೆಯಲ್ಲಿ ವಿನ್ಯಾಸ ಅಭಿವೃದ್ಧಿ ಪರೀಕ್ಷೆ ಮತ್ತು ಆವಿಷ್ಕಾರದಲ್ಲಿ ಪ್ರಮುಖ ಪಾತ್ರವಹಿಸಿದ ತಾಂತ್ರಿಕ ಘಟಕದ ಹಿರಿಯ ವಿಜ್ಞಾನಿ ಟಿ ಎಸ್ ಗೋವಿಂದರಾಜ್ ಶೆಟ್ಟಿ, ತರಳಬಾಳು ವಿದ್ಯಾಸಂಸ್ಥೆಯಲ್ಲಿ ಓದಿದವರು.

ಜಗದೀಶ್ ವಿ ಸಜ್ಜನರ ತಾಂತ್ರಿಕ ಸಹಾಯಕರು, ಯು. ಆರ್ ರಾವ್ ಉಪಗ್ರಹ ಕೇಂದ್ರ ಬೆಂಗಳೂರು ಇವರು ಶ್ರೀ ಗುರು ಮುದುಕೇಶ್ವರ ಪ್ರೌಢಶಾಲೆ, ಕಲಕೇರಿಯಲ್ಲಿ ಓದಿದವರು. ತರಳಬಾಳು ಇಂಜಿನಿಯರಿಂಗ್ ಕಾಲೇಜಿನ ಎಲೆಕ್ಟ್ರಾನಿಕ್ ವಿಭಾಗದ ಉಪನ್ಯಾಸಕಿ ಎಂ.ಹೇಮಲತಾ ಅವರು ಇಸ್ರೋ ಸಂಸ್ಥೆಗೆ ವಿಜ್ಞಾನಿಯಾಗಿ ಸೇರಿಕೊಂಡಿದ್ದರು.

ಶಿವ ಶಕ್ತಿ ಅಂದರೆ ಶಿವನು ಶಕ್ತಿಯೊಂದಿಗೆ ಜೊತೆಗೂಡಿದರೆ ಮಾತ್ರ ಈ ಭವಕ್ಕೆ ಪ್ರಪಂಚಕ್ಕೆ ಶಕ್ತಿ, ಸಾಮರ್ಥ್ಯ ಎಂಬುದು ದೊರಕುತ್ತದೆ. ಹಾಗೆಯೇ ತರಳಬಾಳು ಮಠದಲ್ಲಿ ಶ್ರೀ ಶಿವಕುಮಾರ ಮಹಾಸ್ವಾಮಿಗಳವರು ಶಕ್ತಿ ಶ್ರೀ ಡಾ. ಶ್ರೀಗಳವರು ಎಂದರೆ ಅತಿಶೋಕ್ತಿಯಾಗಲಾರದು. ಸೆಪ್ಟೆಂಬರ್ 20ರಿಂದ 24ರವರೆಗೆ ಸಿರಿಗೆರೆಯಲ್ಲಿ ಲಕ್ಷಾಂತರ ಜನ ಭಕ್ತಿ ಶ್ರದ್ಧಾಂಜಲಿ ಅರ್ಪಿಸುತ್ತಿದ್ದಾರೆ. ಸಮಾಜದ ಒಳಿತಿಗಾಗಿ ಹಗಲಿರುಳು ಭಕ್ತರನ್ನು ಕೈಹಿಡಿದು ಮುನ್ನಡೆಸುತ್ತಿರುವ ಲಿಂಗೈಕ್ಯ ಪರಮಪೂಜ್ಯರ ಭಾವಪೂರ್ಣ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಪುನೀತರಾಗೋಣ.

**– ಸುರೇಶ ಎನ್.ಕೆ.**
ಶಿಕ್ಷಕರು, ಶ್ರೀ ಗುರು ಮುದುಕೇಶ್ವರ ಪ್ರೌಢಶಾಲೆ, ಕಲಕೇರಿ-ಮುಂಡರಗಿ.

### ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರ ನಲ್ನುಡಿಗಳು

* ಶಿಕ್ಷಣದಲ್ಲಿ ಪರಿವರ್ತನೆಯಾಗದೆ ಜಗತ್ತಿಗೆ ಸುಖವಿಲ್ಲ. ವಿದ್ಯಾರ್ಥಿಗಳಿಗೆ ಔದ್ಯೋಗಿಕ, ವ್ಯಾವಹಾರಿಕ, ಆಧ್ಯಾತ್ಮಿಕ ಈ ಮೂರು ಶಿಕ್ಷಣಗಳನ್ನು ಕೊಡಬೇಕು.
* ಯಾವ ಸಮಾಜದಲ್ಲಿ ಉತ್ತಮ ತಾಯಂದಿರಿಲ್ಲವೋ, ಆ ಸಮಾಜವು ಮುಂದುವರೆಯುವುದು ಸಾಧ್ಯವಿಲ್ಲ.
* ಹಾಗೆ ಮಾಡಬೇಕು, ಹೀಗೆ ಮಾಡಬೇಕೆನ್ನುವುದಕ್ಕಿಂತ ಮಾಡಿ ತೋರಿಸುವುದು ಉತ್ತಮ.
* ಜನರ ಅಪವಾದಗಳಿಗೆ ಶುದ್ಧಾಂತ ಕರ್ಣನೆಂದಿಗೂ ಅಂಜುವುದಿಲ್ಲ.
* ಮಾನವನ ಅಸೂಯೆಗೆ ಮಿತಿ, ಇಲ್ಲ ಅಹಂಕಾರಕ್ಕೂ ಮಿತಿ ಇಲ್ಲ.
* ಮನುಷ್ಯನನ್ನು ಮನುಷ್ಯ ಕೆಡಿಸಲಾರ. ಪರಮೇಶ್ವರನ ಕೃಪೆ ತಪ್ಪಿದರೆ ಯಾರೂ ಕಾಪಾಡಲಾರರು..
* ಸತ್ಯವೇ ಆತ್ಮನ ಆಹಾರ. ಸತ್ಯಕ್ಕಾಗಿ ಜೀವಿಸು, ಸತ್ಯದಲ್ಲಿರುವ ಆನಂದವನ್ನು ಅನುಭವಿಸು.
* ಮನಸ್ಸು ಸ್ಥಿರವಿಲ್ಲದ ಮನುಷ್ಯನು ಯಾವ ಕಾರ್ಯವನ್ನೂ ಆರಂಭಿಸಬಾರದು.
* ಚಂಚಲ ಮನಸೇ ಸಮಸ್ತ ವಿಪತ್ತಿಗೂ ಕಾರಣವಾಗಿದೆ.
* ಜನರ ಅಪವಾದಗಳಿಗಂಜಬೇಡ. ಸ್ವಾರ್ಥವು ಸಿಗದಿದ್ದರೆ ದೂಷಿಸುತ್ತಾರೆ. ಸಿಕ್ಕರೆ ಹೊಗಳುತ್ತಾರೆ. ಅವರ ಹೊಗಳಿಕೆಗೂ ಬೆಲೆ ಇಲ್ಲ. ಉಗುಳಿಕೆಗೂ ಬೆಲೆ ಇಲ್ಲ.

---

## ಸೆ.22, 'ವಿಶ್ವ ಗುಲಾಬಿ ದಿನ'ದ ನಿಮಿತ್ತ ವಿಶೇಷ ಲೇಖನ

# ಗುಲಾಬಿಯ ಹಿಂದಿನ ನೋವಿನ ನೆರಳು

ಇಂದು 'ವಿಶ್ವ ಗುಲಾಬಿ ದಿನ'ವೆಂದು ಆಚರಿಸಲಾಗುತ್ತಿದೆ. ಉಳಿದ ದಿನಗಳಂತೆ ಈ ದಿನದ ಹಿಂದೆ ನಗುವಿನ ನೆರಳಿಲ್ಲ. ಸಾವಿನ ಮನೆಯ ಕದ ತಟ್ಟಿ, ಸಾವನ್ನೂ ಸೋಲಿಸಿ, ಬದುಕಲೇಬೇಕೆಂಬ ಉತ್ಕಟ ಇಚ್ಛೆಯೊಂದಿಗೆ, ಅದಮ್ಯ ಚೈತನ್ಯವನ್ನೆಲ್ಲ ಒಟ್ಟುಗೂಡಿಸಿಕೊಂಡ ಕ್ಯಾನ್ಸರ್ ರೋಗಿಗಳಿಗೆ ಈ ದಿನ ಮೀಸಲು.

ಈ ದಿನದ ಇತಿಹಾಸ ಹುಡುಕಹೊರಟರೆ, ಕೆನಡಾದ 12 ವರ್ಷದ ಬಾಲಕಿ ಮೆಲಿಂಡಾ ರೋಸ್ ಕಡೆ ಹೊರಳುತ್ತದೆ. ಈಕೆಗೆ ಅತೀ ಅಪರೂಪದ ರಕ್ತದ ಕ್ಯಾನ್ಸರ್-ಆಸ್ಕಿನ್ ಟ್ಯೂಮರ್ ಇರುವುದು ಪತ್ತೆಯಾಯಿತು. ಆದರೆ, ಒಂದಿನಿತೂ ಎದೆಗುಂದದೆ, ವೈದ್ಯರೂ ಅಚ್ಚರಿ ಪಡುವಂತೆ ಬದುಕಿರುವಷ್ಟು ದಿನವೂ ಚೈತನ್ಯದ ಬುಗ್ಗೆಯಂತೆ ಕಳೆದುಬಿಟ್ಟಳು. ಪುಟ್ಟ ಹುಡುಗಿಯ ಇಚ್ಛಾಶಕ್ತಿ ಮತ್ತು ಬದುಕುವ ಉತ್ಸಾಹ, ಮಾರಕ ಕ್ಯಾನ್ಸರ್ ರೋಗದ ವಿರುದ್ಧ ಹೋರಾಡಲು ವಿಶ್ವದಾದ್ಯಂತ ಲಕ್ಷಾಂತರ ಜನರಿಗೆ ಸ್ಫೂರ್ತಿ ನೀಡಿತು.

ಮಿಲಿಂಡಾಳಲ್ಲಿ ಈ ಖಾಯಿಲೆ ಇರುವುದು ಖಾತ್ರಿಯಾದ ನಂತರ, ವೈದ್ಯರು ಅವಳಿನ್ನು ಬದುಕುವದು ಕೆಲವೇ ವಾರ ಮಾತ್ರ ಎಂದುಬಿಟ್ಟರು. ರೋಸ್ ತನ್ನ ಕೊನೆಯ ಉಸಿರಿರುವವರೆಗೂ ಜೀವನೋತ್ಸಾಹವನ್ನು ಬಿಡಲಿಲ್ಲ. ಆಕೆಯ ಕುಟುಂಬದ ಹೇಳಿಕೆಯ ಪ್ರಕಾರ, ರೋಸ್‌ಗೆ ಚಿಕಿತ್ಸೆ ನೀಡುತ್ತಿರುವ ವೈದ್ಯರು ಅಪರೂಪದ ಆಸ್ಕಿನ್ ಟ್ಯೂಮರ್‌ಗೆ ಯಾವುದೇ ಚಿಕಿತ್ಸೆಯಿಲ್ಲ ಎಂದುಬಿಟ್ಟರು. ಆಕೆ ನಾಲ್ಕು ತಿಂಗಳಿಗೂ ಹೆಚ್ಚು ಕಾಲ ಆಸ್ಪತ್ರೆಗೆ ದಾಖಲಾಗಿದ್ದಳು. ಕಿಮೋಥೆರಪಿಯನ್ನು ಪಡೆದಳು. ಸೆಪ್ಟೆಂಬರ್ 1994ರಲ್ಲಿ, ವೈದ್ಯರು ಅವಳಿಗೆ ಇನ್ನೂ ತೀವ್ರವಾದ ವಿಕಿರಣ ಚಿಕಿತ್ಸೆಯನ್ನು ನೀಡಲು ಪ್ರಾರಂಭಿಸಿದರು. ತೀವ್ರವೆಂದರೆ, ಅವಳ ವಯಸ್ಸಿಗೆ ಅದಕ್ಕಿಂತೂ ಹೆಚ್ಚಿನ ಕಿಮೋಥೆರಪಿಯನ್ನು ಯಾವ ವೈದ್ಯರೂ ಒಪ್ಪದಷ್ಟು.

ಆದರೆ, ಈ ಎಲ್ಲಾ ಹಿಂಸೆಯ ನಡುವೆಯೂ ಆಕೆ ತಾನು ಶಾಲೆಗೆ ಹೋಗಬೇಕೆನ್ನುತ್ತಿದ್ದಳು. ಗೆಳೆಯರನ್ನು ಭೇಟಿ ಮಾಡಬೇಕೆಂದು ಹಠ ಹಿಡಿದು ಕೂರುತ್ತಿದ್ದಳು. ಈವತ್ತು ಊಟ ಮಾಡಿದರೆ ಮನೆಯಲ್ಲೇ ಎಂದು ಮುನಿಸಿಕೊಳ್ಳುತ್ತಿದ್ದಳು. ತಾನು ಎಂತಹ ಸಂದಿಗ್ಧದಲ್ಲಿದ್ದೇನೆ, ಪ್ರಯಾಣ ಯಾವ ಕಡೆ ಸಾಗಿದೆ ಎಂಬ ಯಾವ ಅರಿವೂ ಆಕೆಗಿರಲಿಲ್ಲ. ಅಂತಿಮವಾಗಿ, ಅವಳ ದೇಹವು ಇನ್ನು ಮುಂದೆ ಕೀಮೋಥೆರಪಿಯನ್ನು ಸಹಿಸದು ಎಂಬ ಹಂತಕ್ಕೆ ತಲುಬಿದಾಗ, ವೈದ್ಯರೂ ಕೈಚೆಲ್ಲಿದರು. ಚಿಕಿತ್ಸೆಯನ್ನು ಅಲ್ಲಿಗೇ ನಿಲ್ಲಿಸಲು ನಿರ್ಧರಿಸಿದರು. ಕಾರಣ, ಪ್ರಸ್ತುತ ನೀಡುತ್ತಿರುವ ಚಿಕಿತ್ಸೆ ಒಳ್ಳೆಯದಕ್ಕಿಂತ ಹೆಚ್ಚು ಹಾನಿಯನ್ನುಂಟುಮಾಡುತ್ತಿದೆ ಎಂದು ವೈದ್ಯರಿಗೂ ಅರ್ಥವಾಗಿತ್ತು.

ಅಂತಿಮವಾಗಿ, ಅವಳನ್ನು ಮನೆಗೆ ಕಳುಹಿಸಲಾಯಿತು. ಆಕೆ, ಆಸ್ಪತ್ರೆಗಿಂತಲೂ ಮನೆಯಲ್ಲೇ ಹೆಚ್ಚು ಗೆಲುವಾಗಿದ್ದಳು. ಜುಲೈ 1996ರಲ್ಲಿ ಮಿಲಿಂಡಾ ತನ್ನ ಪಾಲಕರಲ್ಲಿ, ಒಂದು ವಾರ ಗುಡ್‌ಟೈಮ್ಸ್ ಕ್ಯಾಂಪ್‌ಗೆ ಕರೆದುಕೊಂಡು ಹೋಗಿ ಎಂದಳು. ಗುಣಪಡಿಸುವ ಹಂತಗಳನ್ನೆಲ್ಲಾ ದಾಟಿ, ಬದುಕಿನ ಕೊನೆಯ ಮೆಟ್ಟಿಲಲ್ಲಿರುವ ಅದೆಷ್ಟೋ ರೋಗಿಗಳಿರುವ ಕ್ಯಾಂಪ್ ಅದು.ಅಲ್ಲಿ ರೋಸ್ ತನ್ನ ಹೆಚ್ಚಿನ ಸಮಯವನ್ನು ಇತರ ಯುವ ಕ್ಯಾನ್ಸರ್ ರೋಗಿಗಳು ಮತ್ತು ಅವರ ಆರೈಕೆದಾರರನ್ನು ಸಮಾಧಾನಪಡಿಸಲು ಮತ್ತು ಸಲಹೆ ನೀಡಲು ಕಳೆದಳು. 1996ರ ಸೆಪ್ಟೆಂಬರ್ 15ರಂದು ಈ ಭಯಾನಕ ಕಾಯಿಲೆಗೆ ಬಲಿಯಾಗುವವರೆಗೂ ಆ ಯುವತಿ ತನ್ನ ಹೋರಾಟವನ್ನು ಮುಂದುವರೆಸಿದ್ದಳು. ಜೀವನದ ಬಗ್ಗೆ ಅವಳ ಉತ್ಸಾಹ, ಬದುಕುವ ಉತ್ಸಾಹ, ಅವಳ ಎಂದಿಗೂ ಮುಗಿಯದ ಭರವಸೆ ಮತ್ತು ನಿಜವಾದ ಕಾಳಜಿ ಅನೇಕ ಜನರಿಗೆ ಸ್ಫೂರ್ತಿಯಾಯಿತು.

ಈ ದಿನವನ್ನು ಕ್ಯಾನ್ಸರ್ ರೋಗಿಗಳ ಕಲ್ಯಾಣಕ್ಕಾಗಿ ಮೀಸಲಿಡಲಾಗಿದೆ. ಕ್ಯಾನ್ಸರ್ ಚಿಕಿತ್ಸೆಯು ದೇಹದ ಮೇಲೆ ಮಾತ್ರವಲ್ಲದೆ ಮನಸ್ಸಿನ ಮೇಲೂ ಪರಿಣಾಮ ಬೀರುತ್ತದೆ. ರೋಗಿಗಳು ಚಿಕಿತ್ಸೆಯೊಂದಿಗೆ ದೇಹದಲ್ಲಿ ಬದಲಾವಣೆಗಳನ್ನು ಅನುಭವಿಸುತ್ತಾರೆ ಮತ್ತು ಅದೇ ಸಮಯದಲ್ಲಿ ಮಾನಸಿಕ ಆಘಾತವನ್ನೂ ಅನುಭವಿಸುತ್ತಾರೆ. ಆದ್ದರಿಂದ, ರೋಗಿಗಳನ್ನು ಉಲ್ಲಾಸದಿಂದ ಇರಿಸುವುದು ಮುಖ್ಯ.

**– ಅಲೆಮಾರಿ.**



ಕ್ಯಾನ್ಸರ್ ರೋಗಿಗಳು ಬಲವಾದ ಇಚ್ಛಾಶಕ್ತಿ ಮತ್ತು ಉತ್ಸಾಹದಿಂದ ರೋಗವನ್ನು ಎದುರಿಸಬಹುದು ಎಂದು ಅರಿವು ಮೂಡಿಸಲು, ಕ್ಯಾನ್ಸರ್ ರೋಗಿಗಳ ಜೀವನದಲ್ಲಿ ಸಂತೋಷವನ್ನು ತರಲು ಸೆಪ್ಟೆಂಬರ್ 22ರಂದು 'ವಿಶ್ವ ಗುಲಾಬಿ ದಿನ'ವನ್ನು ಆಚರಿಸಲಾಗುತ್ತದೆ. ಈ ದಿನ, ಕೈಯಿಂದ ತಯಾರಿಸಿದ ಗುಲಾಬಿಗಳು, ಕಾರ್ಡ್‌ಗಳು ಮತ್ತು ಉಡುಗೊರೆಗಳನ್ನು ಕ್ಯಾನ್ಸರ್ ರೋಗಿಗಳಿಗೆ ನೀಡಲಾಗುತ್ತದೆ. ಈ ದಿನವನ್ನು ರೋಗದ ವಿರುದ್ಧ ಧೈರ್ಯದಿಂದ ಹೋರಾಡಿದ ಮತ್ತು ಭರವಸೆಯನ್ನು ನೀಡಿದ ಕ್ಯಾನ್ಸರ್ ರೋಗಿಗಳಿಗೆ ಅರ್ಪಿಸಲಾಗಿದೆ. ಗುಲಾಬಿ ಪ್ರೀತಿ, ಕೋಮಲತೆ ಮತ್ತು ಕಾಳಜಿಯ ಸಂಕೇತವೂ ಹೌದು.

---

## ಶ್ರೀ ವೀರಭದ್ರೇಶ್ವರ ಜಯಂತ್ಯುತ್ಸವ ಸಮಾರಂಭದಲ್ಲಿ ಶ್ರೀ ರಂಭಾಪುರಿ ಜಗದ್ಗುರುಗಳು

# ನೆಮ್ಮದಿಯ ಬದುಕಿಗೆ ಅರಿವು, ಆದರ್ಶಗಳು ಮುಖ್ಯ

**■ ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ**

ಮನುಷ್ಯ ಯಾವಾಗಲೂ ಸುಖವನ್ನೇ ಬಯಸುತ್ತಾನೆ. ಸುಖದ ಮೂಲ ಧರ್ಮಾಚರಣೆಯಲ್ಲಿದೆ. ಅರಿವು-ಆದರ್ಶಗಳ ಪರಿಪಾಲನೆಯಿಂದ ಜೀವನದಲ್ಲಿ ಶಾಂತಿ, ನೆಮ್ಮದಿ ಕಾಣಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಅವರು ಮಂಗಳವಾರ ತಮ್ಮ ಜನ್ಮ ಭೂಮಿ ಹುಬ್ಬಳ್ಳಿ ತಾಲೂಕಿನ ಹಳ್ಳಿಯಾಳ ಗ್ರಾಮದ ಪಂಚಗೃಹ ಹಿರೇಮಠದಲ್ಲಿ ಶ್ರೀ ಸೋಮೇಶ್ವರ ಮಹಾಲಿಂಗ ಹಾಗೂ ಶ್ರೀ ವೀರಭದ್ರೇಶ್ವರ ಮಂಗಲ ಮೂರ್ತಿ ಪ್ರತಿಷ್ಠಾಪಿಸಿ, ನಂತರ ಜರುಗಿದ ಶ್ರೀ ವೀರಭದ್ರೇಶ್ವರ ಜಯಂತ್ಯುತ್ಸವ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಶಿವ ಸಂಸ್ಕೃತಿ ಸಂವರ್ಧಿಸಿ ಜನರ ಮನೆ ಮನದಲ್ಲಿ ಶಾಂತಿ ನೆಲೆಗೊಳಿಸಲು ಶ್ರಮಿಸಿದ ಮಹಾನ್ ಪುರುಷ ಶ್ರೀ ವೀರಭದ್ರಸ್ವಾಮಿ. ಶ್ರೀ ರಂಭಾಪುರಿ ಪೀಠದ ಕ್ಷೇತ್ರನಾಥನಾಗಿ ಗೋತ್ರ ಪುರುಷನಾಗಿ ಎಲ್ಲೆಡೆ ಪೂಜೆಗೊಳ್ಳುತ್ತಿದ್ದಾನೆ. ಅವನೆಲ್ಲಿ ನೆಲೆಸಿದರೂ ಆತನ ಮೂಲ ಶಕ್ತಿ ಕೇಂದ್ರ ಶ್ರೀ ರಂಭಾಪುರಿ ಪೀಠದಲ್ಲಿರುವ ಶ್ರೀ ವೀರಭದ್ರಸ್ವಾಮಿ ಎಂಬುದನ್ನು ಮರೆಯುವಂತಿಲ್ಲ. ಇಂಥ ಮಹಿಮಾ ಪುರುಷನ ಜಯಂತ್ಯುತ್ಸವ ರಾಜ್ಯದ ಬಹಳಷ್ಟು ಭಾಗಗಳಲ್ಲಿ ಆಚರಿಸುತ್ತಿರುವುದು ತಮಗೆ ಹರುಷ ತಂದಿದೆ ಎಂದರು.

ಸೂಡಿ ಜುಕ್ತಿ ಹಿರೇಮಠದ ಡಾ. ಕೊಟ್ಟೂರು ಬಸವೇಶ್ವರ ಶಿವಾಚಾರ್ಯರು, ಸುಳ್ಳ ಪಂಚಗೃಹ ಹಿರೇಮಠದ ಶಿವಸಿದ್ಧರಾಮೇಶ್ವರ ಶಿವಾಚಾರ್ಯರು, ಚಳಗೇರಿ ಹಿರೇಮಠದ ವೀರಸಂಗಮೇಶ್ವರ ಶಿವಾಚಾರ್ಯರು, ಸಂಗೊಳ್ಳಿ ಹಿರೇಮಠದ ಗುರುಲಿಂಗ ಶಿವಾಚಾರ್ಯರು, ಕಲ್ಲೂರ ವೀರಯ್ಯ, ಹೆಗ್ಗಡಹಳ್ಳಿಮಠದ ಮಲ್ಲಿಕಾರ್ಜುನಸ್ವಾಮಿ ಪಾಲ್ಗೊಂಡು ನುಡಿ ನಮನ ಸಲ್ಲಿಸಿದರು.

ಗ್ರಾಮದ ಹಿರಿಯರಾದ ಬಿ.ಡಿ ನಾಗನಗೌಡ, ಗುರುನಾಥಗೌಡ ಮಾದಾಪುರ, ಗುರುಪಾದಪ್ಪ ಬೆಳವಟಗಿ, ಟಾಕನಗೌಡ ಗಬ್ಬೂರು, ಉಮೇಶಗೌಡ ಪಾಟೀಲ, ಉಮೇಶ ಹೊಸಮನಿ, ಗ್ರಾಮ ಪಂಚಾಯಿತಿ ಅಧ್ಯಕ್ಷ ನಲವಡಿ, ಗ್ರಾಮಾಭಿವೃದ್ಧಿ ಅಧಿಕಾರಿ ಮತ್ತು ಸದಸ್ಯರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ಸಮಾರಂಭಕ್ಕೂ ಮುನ್ನ ಶ್ರೀ ರಂಭಾಪುರಿ ಜಗದ್ಗುರುಗಳು ಇಷ್ಟಲಿಂಗ ಪೂಜೆ ನೆರವೇರಿಸಿ ಭಕ್ತ ಸಮುದಾಯಕ್ಕೆ ಶುಭ ಹಾರೈಸಿದರು. ಹುಬ್ಬಳ್ಳಿ ವೀರೇಶ ಪಾಟೀಲ ಅವರಿಂದ ಅನ್ನ ದಾಸೋಹ ಜರುಗಿತು.



ಮನುಷ್ಯನಲ್ಲಿ ದೈವೀ ಗುಣ ಮತ್ತು ಅಸುರೀ ಗುಣ ಎರಡೂ ಇವೆ. ದೈವೀ ಗುಣ ಹೆಚ್ಚು ಬೆಳೆದಾಗ ಅಸುರೀ ಗುಣಗಳು ನಾಶಗೊಳ್ಳುತ್ತವೆ. ಅಸುರೀ ಗುಣಗಳು ಬೆಳೆದರೆ ದೈವೀ ಗುಣಗಳಿಗೆ ಅವಕಾಶವೇ ಇರುವುದಿಲ್ಲ. ದುಷ್ಟ ಪ್ರವೃತ್ತಿ ನಾಶಗೊಳಿಸಿ ಸಾತ್ವಿಕ ಶಕ್ತಿ ಬೆಳೆಸಲು ನಿಜವಾದ ಅರಿವು ಮತ್ತು ಧರ್ಮ ಪರಿಪಾಲನೆ ಅವಶ್ಯಕ. ದಕ್ಷನ ದುರಹಂಕಾರ ಮಿತಿ ಮೀರಿದಾಗ ಶಿವನಿಗೆ ಅಪಮಾನ ಮಾಡಿದ ಸಂದರ್ಭದಲ್ಲಿ, ಪರಶಿವನ ಜಟಾಮುಕುಟದಿಂದ ಶ್ರೀ ವೀರಭದ್ರಸ್ವಾಮಿ ಅವತರಿಸಿ ದಕ್ಷನ ದುರಹಂಕಾರ ನಾಶ ಮಾಡುತ್ತಾನೆ. ವ್ಯಕ್ತಿ ಶಕುನಿಯಾದರೆ ಧರ್ಮ ಮತ್ತು ಸಮಾಜ ಛಿದ್ರಗೊಳ್ಳುತ್ತದೆ. ವ್ಯಕ್ತಿ ವೀರಭದ್ರನಾಗಿ ಬಾಳಿದರೆ ಧರ್ಮ ಸಂಸ್ಕೃತಿ ಪುನರುತ್ಥಾನಗೊಳ್ಳಲು ಸಾಧ್ಯ.

**– ಡಾ.ವೀರಸೋಮೇಶ್ವರ ಜಗದ್ಗುರುಗಳು.**
ಶ್ರೀ ರಂಭಾಪುರಿ ಪೀಠ, ಬಾಳೆಹೊನ್ನೂರು.

# ಜಿಲ್ಲಾ ಉಸ್ತುವಾರಿ ಸಚಿವರ ಸೂಚನೆ ಉಲ್ಲಂಘಿಸಬೇಡಿ

▶▶ಮೊದಲನೇ ಪುಟದಿಂದ

ಕೊರತೆ ಇದೆ ಎಂದು ಎಡಿಎ ರೇವಣೆಪ್ಪ ಮನಗೂಳಿ ಸಭೆಗೆ ತಿಳಿಸಿದರು. ನಂತರ ಆಡಳಿತಾಧಿಕಾರಿ ಮಾತನಾಡಿ, ಕೇಂದ್ರ ತಂಡ ಪರಿಶೀಲನೆ ನಡೆಸಿದ ನಂತರ ಪರಿಹಾರ ಸಿಗಲಿದೆ. ರೈತರಿಂದ ಯಾವುದೇ ತರಹದ ದೂರುಗಳು ಬರದಂತೆ ಕೆಲಸ ಮಾಡಬೇಕೆಂದು ಸೂಚಿಸಿದರು.

**ಗೈರು ಉಳಿದವರ ಬಗ್ಗೆ ಡಿಸಿ ಗಮನಕ್ಕೆ ತನ್ನಿ:** ಸಭೆಗೆ ಪದೇ ಪದೇ ಗೈರು ಉಳಿಯುತ್ತಿರುವ ತಾಲೂಕಾ ಮಟ್ಟದ ಅಧಿಕಾರಿಗಳ ವರ್ತನೆ ಬಗ್ಗೆ ಜಿಲ್ಲಾಧಿಕಾರಿಗಳ ಗಮನಕ್ಕೆ ತರಬೇಕೆಂದು ತಾ.ಪಂ ಇಓ ಡಾ. ಎನ್. ಎಚ್ ಓಲೇಕಾರ ಆಡಳಿತಾಧಿಕಾರಿಗೆ ಹೇಳಿದರು. ಇದಕ್ಕೆ ಆಡಳಿತಾಧಿಕಾರಿ ಪ್ರತಿಕ್ರಿಯಿಸಿ, ಗೈರು ಉಳಿದ ಎಲ್ಲ ಅಧಿಕಾರಿಗಳಿಗೆ ನೋಟೀಸ್ ನೀಡಿ. ಈ ಬಗ್ಗೆ ಸಭೆಯಲ್ಲಿ ಠರಾವು ದಾಖಲಿಸಿ ಜಿಲ್ಲಾಧಿಕಾರಿಗಳ ಗಮನಕ್ಕೆ ತರಲಾಗುವುದು ಎಂದರು.

ತಾ.ಪಂ ಇಓ ಡಾ. ಎನ್.ಎಚ್ ಓಲೇಕಾರ ಹಾಗೂ ತಾಲೂಕಿನ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

# ವಸತಿ ನಿಲಯ ಪ್ರವೇಶಕ್ಕೆ ಅರ್ಜಿ ಸಲ್ಲಿಸಲು ಅವಧಿ ವಿಸ್ತರಣೆ

▶▶ಮೊದಲನೇ ಪುಟದಿಂದ

ಕಲ್ಯಾಣ ಇಲಾಖೆ, ರೋಣ 08381-267120/9480843131. ಶಿರಹಟ್ಟಿ ತಾಲೂಕಿನ ಸಹಾಯಕ ನಿರ್ದೇಶಕರ ಕಚೇರಿ ಸಮಾಜ ಕಲ್ಯಾಣ ಇಲಾಖೆ, ಶಿರಹಟ್ಟಿ 08487-242312/9480843132. ಮುಂಡರಗಿ ತಾಲೂಕಿನ ಸಹಾಯಕ ನಿರ್ದೇಶಕರ ಕಚೇರಿ ಸಮಾಜ ಕಲ್ಯಾಣ ಇಲಾಖೆ, ಮುಂಡರಗಿ 08371-262449/9480843129. ನರಗುಂದ ತಾಲೂಕಿನ ಸಹಾಯಕ ನಿರ್ದೇಶಕರ ಕಚೇರಿ ಸಮಾಜ ಕಲ್ಯಾಣ ಇಲಾಖೆ, ನರಗುಂದ 08377-245731/9480843130. ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ಸರ್ಕಾರದ ನೆರವಿನೊಂದಿಗೆ ಸಹಕಾರಿ ಸಂಘಗಳ ಉತ್ತೇಜನ

▶▶ಮೊದಲನೇ ಪುಟದಿಂದ

ಮುಖೇನ, ರೈತರ ಪ್ರಗತಿಗೆ ಶ್ರಮಿಸಿದಾಗ ಸಹಕಾರ ಸಂಘಗಳ ಬೆಳವಣಿಗೆ ಸಾಧ್ಯವಾಗುತ್ತದೆ ಎಂಬುದನ್ನು ನಮ್ಮ ಆಡಳಿತಾವಧಿಯಲ್ಲಿ ಸಾಕ್ಷೀಕರಿಸಿದ್ದು, ಮುಂದಿನ ದಿನಗಳಲ್ಲಿ ಸರಕಾರದ ನೆರವನ್ನು ಪಡೆದು ಸಹಕಾರಿ ಸಂಘಗಳ ಉತ್ತೇಜನಕ್ಕೆ ಮತ್ತಷ್ಟು ಪ್ರಯತ್ನ ಪಡಲಾಗುವುದು ಎಂದರು.

ಶಾಸಕ ಜಿ.ಎಸ್ ಪಾಟೀಲ, ದಶರಥ ಗಾಣಿಗೇರ, ಸಿದ್ದಣ್ಣ ಬಂಡಿ, ವ್ಹಿ.ಆರ್ ಗುಡಿಸಾಗರ, ವ್ಹಿ.ಬಿ ಸೋಮನಕಟ್ಟಿಮಠ, ಯೂಸುಫ್ ಇಟಗಿ, ಬಸವರಾಜ ನವಲಗುಂದ, ಎ.ಸಿ ಪಾಟೀಲ, ವೀರಪ್ಪ ಬಿಚ್ಚೂರ, ಶರಣಪ್ಪ ಬೆಟಗೇರಿ, ಮುತ್ತಣ್ಣ ಮ್ಯಾಗೇರಿ, ತೋಟಪ್ಪ ನವಲಗುಂದ, ರಾಜಣ್ಣ ಸುಂಕದ ಸೇರಿದಂತೆ ಅನೇಕ ಮುಖಂಡರು, ಸಹಕಾರಿ ಸಂಘಗಳ ಅಧ್ಯಕ್ಷರು, ಸದಸ್ಯರು, ರೈತರು ಉಪಸ್ಥಿತರಿದ್ದರು.

# ಕಾಶಿ ವಿಶ್ವಾರಾಧ್ಯರ ಜಾತ್ರಾ ಉತ್ಸವ

**■ವಿಜಯಸಾಕ್ಷಿ ಸುದ್ದಿ, ನರೇಗಲ್ಲ**

ಸಮೀಪದ ಜಕ್ಕಲಿ ಗ್ರಾಮದ ಹಿರೇಮಠದ ಕಾಶಿ ವಿಶ್ವಾರಾಧ್ಯರ ಜಾತ್ರಾ ಉತ್ಸವವು ಸೋಮವಾರ ವಿಜೃಂಭಣೆಯಿಂದ ಜರುಗಿ-ತು. ಹಿರೇಮಠದ ಶ್ರೀ ಷ.ಬ್ರ. ವಿಶ್ವಾರಾಧ್ಯ ಶಿವಾಚಾರ್ಯ ಮಹಾಸ್ವಾಮೀಜಿಯವರ ಅಧ್ಯಕ್ಷತೆಯಲ್ಲಿ ದಿವ್ಯ ಸಾನಿಧ್ಯ ವಹಿಸಿದ್ದ ಆವರಗೋಳದ ಶ್ರೀ ಷ.ಬ್ರ. ಓಂಕಾರ ಶಿವಾಚಾರ್ಯ ಮಹಾಸ್ವಾಮೀಜಿ ಉತ್ಸವಕ್ಕೆ ಚಾಲನೆ ನೀಡಿದರು.



ಹಿರೇಮಠದಿಂದ ಹೊರಟ ಉತ್ಸವದ ತೇರು ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ಕಲ್ಮೇಶ್ವರ ದೇವಸ್ಥಾನದ ಮೂಲಕ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಾಗಿ ಮರಳಿ ಹಿರೇಮಠದ ಆವರಣ ತಲುಪಿತು. ಈ ವೇಳೆಯಲ್ಲಿ ಸದ್ಭಕ್ತರು ವಿಶ್ವಾರಾಧ್ಯ ಮಹಾರಾಜ ಕೀ ಜೈ ಎಂಬ ಜಯಘೋಷ ಮಾಡುತ್ತಾ ತೇರು ಎಳೆದು ಹರ್ಷ ವ್ಯಕ್ತಪಡಿಸಿದರು. ಮಧ್ಯಾಹ್ನ ಅನ್ನಸಂತರ್ಪಣೆ ಕಾರ್ಯಕ್ರಮ ನಡೆಯಿತು. ರಾತ್ರಿ ಕಲಬುರ್ಗಿ ಶರಣ ಬಸವೇಶ್ವರರ ಮಹಾಪುರಾಣ ಮಂಗಲಗೊಂಡಿತು. ಬಳಿಕ ಧರ್ಮ ಸಭೆ ನಡೆಯಿತು. ಈ ಸಂದರ್ಭದಲ್ಲಿ ಹಲವಾರು ಗಣ್ಯರು ಭಾಗಿಯಾಗಿದ್ದರು.

## ವೀಳ್ಯದೆಲೆ ರೋಗಬಾಧೆಯ ನಿಯಂತ್ರಣಕ್ಕೆ ಸುರೇಶ ಕುಂಬಾರ ಸಲಹೆ

# ಪೋಷಕಾಂಶಗಳ ನಿರ್ವಹಣೆ ಅತ್ಯಗತ್ಯ

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಇದೀಗ ವಿಳ್ಳೆದೆಲೆಗೆ ಕೀಟ ಬಾಧೆ, ರೋಗಗಳ ಬಾಧೆ ಉಂಟಾಗುತ್ತಿದ್ದು, ಈ ಹಿನ್ನೆಲೆಯಲ್ಲಿ ರಾಮಗೇರಿ ವ್ಯಾಪ್ತಿಯಲ್ಲಿನ ಬಸವರಾಜ ಹೊಗೆಸೊಪ್ಪಿನ ಅವರ ವೀಳ್ಯದೆಲೆ ತೋಟಗಳಿಗೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರಾದ ಸುರೇಶ ಕುಂಬಾರ ಭೇಟಿ ನೀಡಿ ಕೀಟ, ರೋಗ ಹಾಗೂ ಪೌಷ್ಟಿಕಾಂಶಗಳ ನಿರ್ವಹಣೆ ಕುರಿತು ಸೂಕ್ತ ಸಲಹೆ ನೀಡಿದರು.



ತಾಲೂಕಿನಲ್ಲಿ, ಸುಮಾರು 50 ಎಕರೆಗಿಂತಲೂ ಹೆಚ್ಚು ಕ್ಷೇತ್ರದಲ್ಲಿ ವೀಳ್ಯದೆಲೆ ಬೆಳೆಯನ್ನು ಬೆಳೆಯಲಾಗುತ್ತಿದೆ. ಕೆಲವು ಕೀಟ ಹಾಗೂ ರೋಗಗಳಿಂದಾಗಿ ಬೆಳೆಯ ಅಭಿವೃದ್ಧಿ, ಇಳುವರಿಯಲ್ಲಿ ಹಿನ್ನಡೆ ಕಂಡುಬರುತ್ತದೆ. ಆದುದರಿಂದ ರೈತರು ಉತ್ಕೃಷ್ಟ ಗುಣಮಟದ ಇಳುವರಿ ಪಡೆಯಲು ಹಲವಾರು ಕ್ರಮಗಳನ್ನು ಕೈಗೊಳ್ಳಬೇಕು ಎಂದು ಅಧಿಕಾರಿಗಳು ತಿಳಿಸಿದರು. ವೀಳ್ಯದೆಲೆಗೆ ಆಸರೆ ಬೆಳೆಯಾಗಿ ಹಾಲಿವಾಳ, ಜೊಗಟೆ, ನುಗ್ಗೆ, ಮುಂತಾದ ಬೆಳೆಗಳನ್ನು ಹಾಕಲಾಗುತ್ತಿದೆ. ಬಸವರಾಜ ಹೊಗೆಸೊಪ್ಪಿನ ಅವರು ವೀಳ್ಯದೆಲೆ ನಾಟಿ ಮಾಡಿ ಸುಮಾರು 3 ತಿಂಗಳ ಕಳೆದಿದ್ದು, ಆಸರೆಯಾಗಿ ನಾಟಿ ಮಾಡಿದ ಚಿಗಟೆಯಲ್ಲಿ, ಕಾಂಡ ಕೊರಕದ ಹುಳು ಕಂಡು ಬಂದಿದೆ. ಇದು ಇಡೀ ಗಿಡವನ್ನೇ ನಾಶಮಾಡುತ್ತಿದೆ. ವೀಳ್ಯದೆಲೆಗೆ ಜೇಡು ನಡೆಸಿ, ಹಿಟ್ಟು ತಿಗಣೆ ಹಾಗೂ ಎರಚುಕ್ಕೆ ಕೀಟಗಳಿಂದ ಬರುವ ಮುದುಡು ರೋಗ ಕಾಣಿಸಿಕೊಂಡಿದೆ. ಆದುದರಿಂದ ಸಮಗ್ರವಾಗಿ ಕೀಟ, ರೋಗ ಹಾಗೂ ಪೋಷಕಾಂಶಗಳ ನಿರ್ವಹಣೆ ಮಾಡಬೇಕಾಗಿರುವುದು ಅತೀ ಅವಶ್ಯಕವಾಗಿದೆ ಎಂದು ಹೇಳಿದರು.

ಇಂತಹ ಕೀಟ ಬಾಧೆ ತಗುಲಿದ ಬೆಳೆಗೆ 25 ಮಿಲೀ ಕೋ. ರೂಂಪಾಳ್ಯ, 30 ಗ್ರಾಂ ಕಾಫರ್ 10 ಕೋಡ್, 30 ಮಿಲೀ ಬೇವಿನ ಎಣ್ಣೆ, 10 ಲೀಟರ್ ನೀರಿನಲ್ಲಿ ಬೆರೆಸಿ, ಪ್ರತಿ ಗಿಡಕ್ಕೆ 15 ದಿನಗಳ ಅಂತರದಲ್ಲಿ ಹಾಕಬೇಕು ಎಂದು ವಿವಿಧ ಔಷಧಿಗಳ ಕುರಿತು ಸುರೇಶ ಕುಂಬಾರ ಸಂಪೂರ್ಣ ಮಾಹಿತಿ ನೀಡಿದರು. ಬಸವರಾಜ ಹೊಗೆಸೊಪ್ಪಿನ ಮತ್ತು ಮಂಜುನಾಥ ಹೊಗೆಸೊಪ್ಪಿನ ಇದ್ದರು.



ಭೂಮಿಗೆ ನಾಟಿ ಮಾಡುವ ಸಂದರ್ಭದಲ್ಲಿ, ಹಾಗೂ ನಾಟಿ ಮಾಡಿದ ನಂತರ 6 ತಿಂಗಳಿಗೊಮ್ಮೆ ಉತ್ತಮ ಗುಣಮಟ್ಟದ ಕೊಟ್ಟಿಗೆ ಗೊಬ್ಬರದ ಜೊತೆಗೆ ಅಣುಜೀವಿ ಗೊಬ್ಬರಗಳಾದ ಟ್ರೈಕೋಡರ್ಮಾ, ಅಜೋಸ್ಪಿಲಂ ಅಜುಟೋಬ್ಯಾಕ್ಟರ್, ಸ್ ೦ ಡ್ ೀ ವ್ ೊ ನ್ ಾ ಸ್ ಮುಂತಾದವುಗಳಿಂದ ಉಪಚರಿಸಿ ಪ್ರತಿ ಎಕರೆಗೆ 5-6 ಟನ್ ನೀಡುವುದು. ಪ್ರತಿ ಎಕರೆಗೆ ಸುಮಾರು 5-16 ಕ್ವಿಂಟಲ್‌ಗಳಷ್ಟು ಬೇವಿನ ಹಿಂಡಿ ಗೊಬ್ಬರ ಕೊಡುವುದು, ನಾಟಿ ಮಾಡಿದ 3, 6, 9, 12ನೇ ತಿಂಗಳಲ್ಲಿ ಪ್ರತಿ ಎಕರೆಗೆ 5 ಕೆಜಿ ಜಿಂಕ್ ಸಲ್ಫೇಟ್, 5 ಕೆಜಿ ಮ್ಯಾಗ್ನೇಸಿಯಂ, 3 ಕೆಜಿ ಬೋರಾನ್ ಮಣ್ಣಿನಲ್ಲಿ ಸೇರಿಸುವುದು ಅವಶ್ಯ ಎಂದು ಮಾಹಿತಿ ನೀಡಿದರು.

# ಗಣೇಶ ಹಬ್ಬದ ನಿಮಿತ್ತ ಶ್ರೀ ಸತ್ಯನಾರಾಯಣ ಪೂಜೆ



**■ವಿಜಯಸಾಕ್ಷಿ ಸುದ್ದಿ, ಗದಗ**

ಗದಗ-ಬೆಟಗೇರಿ ನಗರಸಭೆ ಕಾರ್ಯಾಲಯದಲ್ಲಿ ಗಣೇಶ ಹಬ್ಬದ ನಿಮಿತ್ತ ಶ್ರೀ ಸತ್ಯನಾರಾಯಣ ಪೂಜೆಯನ್ನು ಏರ್ಪಡಿಸಲಾಗಿತ್ತು. ನಗರಸಭೆ ಅಧ್ಯಕ್ಷೆ ಉಷಾ ಎಂ. ದಾಸರ, ಉಪಾಧ್ಯಕ್ಷೆ ಸುನಂದಾ ಪಿ.ಬಾಕಳೆ, ಪೌರಾಯುಕ್ತರಾದ ಗಂಗಪ್ಪ ಎಂ., ನಗರಸಭೆ ಸದಸ್ಯರಾದ ವಿಜಯಲಕ್ಷ್ಮೀ ದಿಂಡೂರ, ಮುತ್ತು ಮುಶಿಗೇರಿ, ವಿದ್ಯಾವತಿ ಗಡಗಿ, ಲಕ್ಷ್ಮೀ ಸಿದ್ದಮನಹಳ್ಳಿ ಸೇರಿದಂತೆ ಸದಸ್ಯರು, ಹಿರಿಯ ಮುಖಂಡರಾದ ವಿಜಯಕುಮಾರ ಗಡ್ಡಿ, ಶಶಿಧರ ದಿಂಡೂರ, ಮಹೇಶ ದಾಸರ, ಮುಂತಾದವರು ಪೂಜಾ ಕಾರ್ಯದಲ್ಲಿ ಪಾಲ್ಗೊಂಡರು.

ಕಛೇರಿಯ ವ್ಯವಸ್ಥಾಪಕರಾದ ಪಿ.ಎಫ್ ಶೇರಖಾನೆ, ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಎಚ್.ಎ ಬಂಡಿವಡ್ಡರ, ಲೆಕ್ಕಾಧೀಕ್ಷಕ ಟಿ.ಎಚ್ ದ್ಯಾವನೂರ, ಸಿಎಓ ಶೋಭಾ ಬೆಳಿಕೊಪ್ಪ, ಪರಿಸರ ಅಭಿಯಂತರ ಆನಂದ ಬದಿ, ಎ.ಎನ್ ಪುಣೇಕರ, ಕೆ.ಟಿ ಯಾದವಾಡ, ಎಸ್.ವಾಯ್ ಸಂಕನಗೌಡರ, ಸಿಂಧು ಗಾಳಿ, ವೆಂಕಟೇಶ ರಾಮಗಿರಿ, ಎಂ.ಎಂ ಮಕಾನದಾರ, ಎಸ್. ಎನ್ ದಳವಾಯಿ, ಸುಷ್ಮಾ ಗುಡಿ, ಎಸ್.ಎಂ ಮಕಾನದಾರ, ಕೆ.ಎಚ್ ಬಾಕಳೆ, ರಾಕೇಶ ಮುಟಗಿ, ಬಿ.ಜಿ ಹಿರೇಮಠ, ಎಂ.ಎಂ ಮುಜಾವರ ಮುಂತಾದ ಸಿಬ್ಬಂದಿಗಳು ಭಾಗವಹಿಸಿದ್ದರು. ಎಲ್ಲರಿಗೂ ಅನ್ನಸಂತರ್ಪಣೆ ಜರುಗಿತು.

# ಅಂಜುಮನ್ ಕಮಿಟಿಯ ಹಣ ದುರ್ಬಳಕೆ ತನಿಖೆಗೆ ಮನವಿ

**■ವಿಜಯಸಾಕ್ಷಿ ಸುದ್ದಿ, ಗದಗ**

ಮುಂಡರಗಿ ಅಂಜುಮನ್ ಕಮೀಟಿಯ ಅಧ್ಯಕ್ಷರು ಮನ ಬಂದಂತೆ ಕಮಿಟಿಯ ಹಣವನ್ನು ದುರ್ಬಳಕೆ ಮಾಡಿದ್ದಾರೆ. ಆದ್ದರಿಂದ ಕಮಿಟಿಯ ಹಣವನ್ನು ಕಮಿಟಿಯ ಖಾತೆಗೆ ತುಂಬಿಸುವ ಕೆಲಸ ಆಗಬೇಕು ಮತ್ತು ಈ ಅಧ್ಯಕ್ಷರ ಬದಲಾವಣೆ ಆಗಬೇಕು ಎಂದು ಆಗ್ರಹಿಸಿ ಜಿಲ್ಲಾ ವಕ್ಫ್ ಮಂಡಳಿಯ ಅಧಿಕಾರಿ ಸಾಲಿಹಾ ಗೋಲಂದಾಜ್ ಅವರಿಗೆ ಮನವಿ ಸಲ್ಲಿಸಿ ಒತ್ತಾಯಿಸಲಾಯಿತು.



11 ಜನರ ಕಮಿಟಿಯಲ್ಲಿ 8 ಜನ ಸದಸ್ಯರು ಈ ಬಗ್ಗೆ ಸಾಕಷ್ಟು ಬಾರಿ ವಿನಂತಿಸಿಕೊಂಡರೂ ಯಾವುದೇ ಕಾನೂನು ಕ್ರಮ ಜರುಗಿಸಿಲ್ಲ. ನಮಗೆ ನ್ಯಾಯ ಸಿಗುವರೆಗೂ ಧರಣಿ ಮುಂದುವರೆಸುತ್ತೇವೆ. ಈ ಧರಣಿಯಿಂದ ಉಂಟಾಗುವ ಸಮಸ್ಯೆಗಳಿಗೆ ಜಿಲ್ಲಾ ವಕ್ಫ ಅಧಿಕಾರಿಗಳೇ ಜವಾಬ್ದಾರರು. ಗಡುವಿನ ಒಳಗಾಗಿ ನಮ್ಮ ಬೇಡಿಕೆ ಕುರಿತು ಶಿಸ್ತು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಮುಂಡರಗಿ ಅಂಜುಮನ್ ಕಮಿಟಿಯ ಪದಾಧಿಕಾರಿಗಳಾದ ಅಬ್ದುಲ್‌ಸಾಬ ಕೊಕ್ಕರಗುಂದಿ, ಮೋಹಿದ್ದಿನ ತಳಗಡೆ, ಇಸ್ಮಾಯಿಲ್ ಮುಲ್ಲಾ, ಮಹಮ್ಮದರಫಿ ಮುಲ್ಲಾ, ಇಸ್ಮಾಯಿಲ್‌ಸಾಬ ಮುಲ್ಲಾ, ಶಿರಾಜ್ ಬೆಟಗೇರಿ, ಸರ್ಫರಾಜ್ ಹಣಗಿ, ದುದ್ದುಸಾಬ ನಾಗರಹಳ್ಳಿ, ಮುಖಂಡರದ ನಬಿಸಾಬ್ ಕೇಲೂರು, ಮೆಹಬೂಬ್ ತಳಗಡೆ, ಅನುಭಾಷಾ ಹಣಗಿ, ಮಾಬುಬ ಮುಲ್ಲಾ, ರಿಯಾಜ್ ತಪ್ಪಡಿ, ದಾವಲ್‌ಸಾಬ್ ಕರ್ನಾಚಿ, ಜಾಫರ್ ಸುಂಕದ, ಖಾದರ್‌ಭಾಷಾ ಪಣಿಬಂಧ, ಇಮ್ರಾನ್‌ಸಾಬ್ ಸೈಯದ್, ಅಲ್ಲಾಭಕ್ಷಿ ಅಳವಂಡಿ, ಮಹಮ್ಮದ್ ಬೆಟಗೇರಿ, ಶಿರಾಜ್ ಅಚ್ಚಳ್ಳಿ, ಶಮ್ಸುದ್ದಿನ ಅಚ್ಚಳಿ, ಎನ್. ಕೆ ಘೋರಿ, ಶಿರಾಜ ಡಂಬಳ, ಮರ್ದಾನ, ತಪ್ಪಡಿ ಭಾಷಾ ವಡ್ಡಟ್ಟಿ, ಜಮೀರ್ ಡಂಬಳ, ಮದೀನಾ ಮಸೀದ್ ಅಧ್ಯಕ್ಷ ಇಮಾಮ್ ತಳಗಡೆ ಮುಂತಾದವರು ಇದ್ದರು.

## ಎಪಿಎಂಸಿ ಶ್ರೀ ಗಜಾನನ ಉತ್ಸವ ಸಮಿತಿ ವತಿಯಿಂದ ರೈತರ ಪರವಾಗಿ ವಿಶೇಷ ಪೂಜೆ

# ಗಣಪನೊಂದಿಗೆ ಗೋಮಾತೆಗೆ ನಮನ



**■ವಿಜಯಸಾಕ್ಷಿ ಸುದ್ದಿ, ಗದಗ**

ನಗರದ ಶ್ರೀ ಗಾನಯೋಗಿ ಪಂಚಾಕ್ಷರಿ ಗವಾಯಿಗಳವರ ಮಾರುಕಟ್ಟೆ ಪ್ರಾಂಗಣ, ಎಪಿಎಂಸಿ ಯಾರ್ಡ್‌ನಲ್ಲಿ ಶ್ರೀ ಗಜಾನನ ಉತ್ಸವ ಸಮಿತಿ ವತಿಯಿಂದ ಗಣೇಶ ಪ್ರತಿಷ್ಠಾಪನೆ ಮಾಡಿ, ಪೂಜಿಸಲಾಗುತ್ತಿದೆ. ನಾಡಿಗೇ ಬಂದಿರುವ ಬರಗಾಲ ನೀಗಿಸಿ, ಸಮೃದ್ಧಿಯಾಗಿ ಮಳೆ, ಬೆಳೆ, ಸಂಪತ್ತನ್ನು ಕರುಣಿಸಲಿ ಎಂದು ರೈತ ಸಮುದಾಯದ ಪರವಾಗಿ ವಿನಾಯಕನ ಜೊತೆಗೆ ಗೋ ಮಾತೆಗೂ ಪೂಜೆ ಸಲ್ಲಿಸಿ ಬರದಿಂದ ರೈತರನ್ನು ಜನರನ್ನು ಕಾಪಾಡುವಂತೆ ವಿಘ್ನ ವಿನಾಯಕನಿಗೆ ಹಾಗೂ 101 ಗೋ ಮಾತೆ, ಎತ್ತುಗಳನ್ನು ಸಿಂಗರಿಸಿ ಗೋಮಾತೆಗೆ ಪೂಜೆ ಸಲ್ಲಿಸಿ ಪ್ರಾರ್ಥನೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಗಜಾನನ ಉತ್ಸವ ಸಮಿತಿಯ ಅಧ್ಯಕ್ಷ ತಿಮ್ಮಣ್ಣ ಕೋನರಡ್ಡಿ ಮಾತನಾಡಿ, ರೈತರಲ್ಲಿ ನೆಮ್ಮದಿ, ಸುಖ, ಶಾಂತಿ ನೆಲೆಸುವಂತೆ ಗಣೇಶ ಹಾಗೂ ಗೋ ಮಾತೆಯಲ್ಲಿ ಭಕ್ತಿಯಿಂದ ಬೇಡಿಕೊಳ್ಳುತ್ತಿದ್ದೇವೆ. ಈ ಬಾರಿ ನಿರೀಕ್ಷಿತ ಮಳೆ ಇಲ್ಲದೆ ರೈತರು ಕಂಗಾಲಾಗಿದ್ದಾರೆ. ಹೀಗಾಗಿ ಮುಕ್ಕೋಟಿ ದೇವರ ಪ್ರತಿರೂಪದಂತಿರುವ ಗೋಮಾತೆಯನ್ನ ಪೂಜಿಸಿ ಪ್ರಾರ್ಥನೆ ಸಲ್ಲಿಸಿದ್ದೇವೆ.

ಭಾರತದಲ್ಲಿ ಪುರಾತನ ಕಾಲದಿಂದಲೂ ಗೋ ಮಾತೆಗೆ ವಿಶೇಷ ಸ್ಥಾನ ನೀಡಲಾಗಿದೆ.

ಮನುಷ್ಯನ ಸೃಷ್ಟಿಯ ನಂತರದಲ್ಲಿ ದೇವರು ಮನುಷ್ಯನ ಬದುಕಿಗಾಗಿ ಗೋ ಮಾತೆ ಹಾಗೂ ಕಲ್ಪ ವೃಕ್ಷ ತೆಂಗಿನ ಮರವನ್ನು ನೀಡಿದ್ದಾನೆ. ಗೋ ಮಾತೆ ಸಂತೃಪ್ತಳಾದರೆ ರೈತರು ಸಮೃದ್ಧರಾಗುತ್ತಾರೆ ಅನ್ನುವ ನಂಬಿಕೆಯಿದೆ ಎಂದರು.

ಈ ಸಂದರ್ಭದಲ್ಲಿ ಚಂದ್ರಣ್ಣ ಸವದತ್ತಿ, ರಾಜು ಮುದೋಳ, ರಾಜು ಮೂಲಿಮನಿ, ಪ್ರಮೋದ್ ವಾರಕರ, ಬಸವರಾಜ ಬಾಳಿಕಾಯಿ, ಅಜಿತ್ ಪುಣೇಕರ, ದಯಾನಂದ ದುಂಡಪ್ಪನವರ, ಈರಣ್ಣ ಕಾಡಪ್ಪನವರ, ನಿತೀಶ ವಾಲಿ, ಪ್ರಕಾಶ ಖೋಡೆ, ಪುನೀತ್ ಬಾಂಡಗೆ, ಮಂಜಣ್ಣ ಬೇಲೇರಿ, ಸತೀಶ್ ಕುಂದಗೋಳ, ಶರತ್ ಅಗಡಿ, ವಿನೂತ್ ಕವಲೂರ, ಸಾಗರ ವಜ್ರಶ್ವರಿ, ಸತೀಶ ಶಲವಡಿ, ಕವಿತಾ ಕೊನರಡ್ಡಿ, ಜ್ಯೋತಿ ಸವದತ್ತಿ, ಶ್ವೇತಾ ವಾರಕರ, ಭಾವನಾ ಪುಣೇಕರ, ಸುನೀತಾ ಮೂಲಿಮನಿ, ಶೋಭಾ ವಾಲಿ, ಸುಮಿತ್ರಾ ಬಳ್ಳೊಳ್ಳಿ, ನಂದಾ ಕೊನರಡ್ಡಿ, ವಿಜಯಲಕ್ಷ್ಮೀ ಕಾಡಪ್ಪನವರ, ಗಜಾನನ ಉತ್ಸವ ಸಮಿತಿ ಸದಸ್ಯರು ಭಾಗವಹಿಸಿದ್ದರು.

# ಗಾಂಧೀಜಿ, ಶಾಸ್ತ್ರೀಜಿ ಜಯಂತಿ ಅದ್ದೂರಿ ಆಚರಣೆಗೆ ನಿರ್ಧಾರ



**■ವಿಜಯಸಾಕ್ಷಿ ಸುದ್ದಿ, ಧಾರವಾಡ**

ಜಿಲ್ಲಾಡಳಿತದಿಂದ ಅಕ್ಟೋಬರ್ 2ರಂದು ಮಹಾತ್ಮಾಗಾಂಧೀಜಿ ಹಾಗೂ ಲಾಲ್‌ಬಹಾದ್ದೂರ ಶಾಸ್ತ್ರಿಜಿಯವರ ಜಯಂತಿಯನ್ನು ಅದ್ದೂರಿಯಾಗಿ ಆಚರಿಸುವ ಬಗ್ಗೆ ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ. ಅವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ನಿರ್ಧರಿಸಲಾಯಿತು.

ಜಿಲ್ಲಾಡಳಿತ, ವಾರ್ತಾ ಹಾಗೂ ಸಾರ್ವಜನಿಕ ಸಂಪರ್ಕ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಗಾಂಧಿ ಶಾಂತಿ ಪ್ರತಿಷ್ಠಾನ ಹಾಗೂ ವಿವಿಧ ಇಲಾಖೆಗಳ ಸಹಯೋಗದಲ್ಲಿ ಅಕ್ಟೋಬರ್ 2ರಂದು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಅ.2 ರಂದು ಬೆಳಿಗ್ಗೆ 8-30 ಗಂಟೆಗೆ ಜಿಲ್ಲಾಡಳಿತದ ಆವರಣದಲ್ಲಿರುವ ಗಾಂಧೀಜಿ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಗುವುದು.

ನಂತರ 9 ಗಂಟೆಗೆ ಆಲೂರು ವೆಂಕಟರಾವ್ ಭವನದಲ್ಲಿ ವಿವಿಧ ಕಾರ್ಯಕ್ರಮಗಳು ಜರುಗಲಿದ್ದು, ಕಾರ್ಮಿಕ ಇಲಾಖೆಯ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಸಂತೋಷ ಲಾಡ್ ಅವರು ಚರಕ ನೂಲುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡುವರು.

ಸಭೆಯಲ್ಲಿ ಜಿಲ್ಲಾ ಉಪಕಾರ್ಯದರ್ಶಿ ಬಿ.ಎಸ್. ಮೂಗನೂರಮಠ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಕುಮಾರ ಬೆಕ್ಕೇರಿ, ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಕೆ.ಎಸ್. ಸುರೇಶ, ಆಹಾರ ಇಲಾಖೆಯ ಜಂಟಿ ನಿರ್ದೇಶಕ ಬಿ. ವಿನೋದಕುಮಾರ, ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕ ಲಕ್ಷ್ಮೀಪತಿ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎಸ್.ಎಸ್. ಕೆಳದಿಮಠ, ಶಿರಸ್ತೇದಾರ ಎಂ.ಜಿ. ಸೊಲಗಿ, ಅವರು ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

## ವಿಜ್ಞಾನ ವಸ್ತುಪ್ರದರ್ಶನ ಉದ್ಘಾಟಿಸಿದ ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎಸ್ ಬುರಡಿ ಕರೆ

# ಹೊಸ ಆವಿಷ್ಕಾರಗಳೆಡೆಗೆ ವಿದ್ಯಾರ್ಥಿಗಳನ್ನು ಪ್ರೇರೇಪಿಸಿ



ಸ್ಪರ್ಧೆಯ ವೈಯಕ್ತಿಕ ವಿಭಾಗದಲ್ಲಿ ಸೇಂಟ್ ಜಾನ್ ಪ್ರೌಢಶಾಲೆ ಪ್ರಥಮ, ವಿದ್ಯಾದಾನ ಪ್ರೌಢಶಾಲೆ ದ್ವಿತೀಯ ಸ್ಥಾನ ಪಡೆದವು. ಗುಂಪು ವಿಭಾಗದಲ್ಲಿ ಅಮನ್ ಪ್ರೌಢಶಾಲೆ ಪ್ರಥಮ, ಮೌಲಾನಾ ಆಜಾದ್ ಪ್ರೌಢಶಾಲೆ ದ್ವಿತೀಯ, ಲೊಯಲಾ ಪ್ರೌಢಶಾಲೆ ತೃತೀಯ ಸ್ಥಾನ ಪಡೆದವು.

**■ವಿಜಯಸಾಕ್ಷಿ ಸುದ್ದಿ, ಗದಗ**

ವಿಜ್ಞಾನ ಮತ್ತು ತಂತ್ರಜ್ಞಾನಗಳು ವಿದ್ಯಾರ್ಥಿಗಳ ಇಂದಿನ ಹಾಗೂ ಭವಿಷ್ಯದ ಜೀವನಕ್ಕೆ ಅವಶ್ಯಕ. ಇದನ್ನು ಸರಿಯಾಗಿ ಬಳಸಿಕೊಂಡು ಅಭ್ಯಾಸ ಮಾಡಿದರೆ ನಿಮ್ಮ ಜೀವನ ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಉತ್ತಮವಾಗಿರುತ್ತದೆ. ಎಲ್ಲ ಶಿಕ್ಷಕ ಬಳಗವು ಗುಣಮಟ್ಟದ, ಅವಶ್ಯಕ, ನಾವೀನ್ಯಯುತ ಆವಿಷ್ಕಾರಗಳೆಡೆಗೆ ವಿದ್ಯಾರ್ಥಿಗಳ ಚಿತ್ತವನ್ನು ಕೊಂಡೊಯ್ಯಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎಸ್ ಬುರಡಿ ಕರೆ ನೀಡಿದರು.

ಅವರು ಬೆಟಗೇರಿಯ ಲೊಯಲಾ ಪ್ರಾಥಮಿಕ ಶಾಲೆಯಲ್ಲಿ ಗದಗ ಶಹರ ವಲಯದ ತಾಲೂಕು ಮಟ್ಟದ ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡಿದ್ದ ವಿಜ್ಞಾನ ವಸ್ತುಪ್ರದರ್ಶನ ಉದ್ಘಾಟಿಸಿ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಜಿಲ್ಲಾ ನೋಡಲ್ ಅಧಿಕಾರಿ, ಡಯಟ್ ಉಪನ್ಯಾಸಕ ಗೋಪಾಲಕೃಷ್ಣ ಡಿ.ದಾಸರ, ಕ್ಷೇತ್ರ ಸಮನ್ವಯಾಧಿಕಾರಿ ಎಚ್.ಎ ಫಾರೂಖಿ, ಪೌಢಶಾಲಾ ಸಹ ಶಿಕ್ಷಕರ ಸಂಘದ ತಾಲೂಕು ಘಟಕದ ಕಾರ್ಯದರ್ಶಿ ಶ್ರೀಕಾಂತ ಬಡ್ಡೂರ, ಲೊಯಲಾ ಕಾನ್ವೆಂಟ್‌ನ ಮುಖ್ಯೋಪಾಧ್ಯಾಯೆ ಸಿಸ್ಟರ್ ಬೆನಿಗ್ನಾ, ನಿರ್ಣಾಯಕರಾಗಿ ಜೆ.ಟಿ ಪದವಿಪೂರ್ವ ಮಹಾವಿದ್ಯಾಲಯದ ಡಾ. ಪಿ.ಸಿ ಪಾಟೀಲ, ಪ್ರೊ. ಐಸಾಕ್ ತಿಮ್ಮನಾಳ, ಸನ್ಮಾರ್ಗ ಪದವಿಪೂರ್ವ ಮಹಾವಿದ್ಯಾಲಯದ ಪ್ರೊ. ವಿಜಯಲಕ್ಷ್ಮೀ ಲಕ್ಷ್ಮೇಶ್ವರ ಆಗಮಿಸಿ ಪಾರದರ್ಶಕ ನಿರ್ಣಯ ನೀಡಿದರು.

ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಎಸ್.ವ್ಹಿ ಲಾಂಡೆ ಸ್ವಾಗತಿಸಿದರು. ಸಮನ್ವಯಾಧಿಕಾರಿ ಎಚ್.ಎ ಫಾರೂಖಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಣ ಸಂಯೋಜಕ ಐ.ಬಿ ಮಡಿವಾಳ ನಿರೂಪಿಸಿದರು. ಕ್ಷೇತ್ರ ಸಂಪನ್ಮೂಲ ವ್ಯಕ್ತಿ ದೀಪಾ ಬೇವಿನಮರದ ವಂದಿಸಿದರು. ಸಂಪೂರ್ಣ ಕಾರ್ಯಕ್ರಮವನ್ನು ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಪ್ರಕಾಶ ಮಂಗಳೂರು, ಸಮನ್ವಯ ಸಂಪನ್ಮೂಲ ವ್ಯಕ್ತಿ ಇ.ಡಿ ಹುಗ್ಗಣ್ಣವರ ನಿರ್ವಹಿಸಿದರು.

# ಪ್ರತಿಭಾ ಕಾರಂಜಿ ಸ್ಪರ್ಧೆಯಲ್ಲಿ ತಾಲೂಕು ಮಟ್ಟಕ್ಕೆ ಆಯ್ಕೆ



■ ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ

ಲಕ್ಕುಂಡಿ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆಯಲ್ಲಿ ಇಲ್ಲಿಯ ಕಿತ್ತೂರ ರಾಣಿ ಚನ್ನಮ್ಮ ವಸತಿ ಶಾಲೆಯ ವಿದ್ಯಾರ್ಥಿಗಳು ತಾಲೂಕು ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಸಮೀಪದ ಹರ್ಲಾಪೂರ ಗ್ರಾಮದ ಸ.ಹಿ.ಪ್ರಾ ಶಾಲೆಯಲ್ಲಿ ಜರುಗಿದ ಪ್ರಾಥಮಿಕ ವಿಭಾಗದಲ್ಲಿ ತನುಷಾ ಲಮಾಣಿ (ಕಂಠಪಾಠ ಕನ್ನಡ), ದೀಪಾ ಕಬ್ಬೇಳ್ಳಿ( ಕಂಠಪಾಠ ಇಂಗ್ಲೀಷ್), ಗೀತಾ ಡೊಳ್ಳಿನ(ಲಘು ಸಂಗೀತ), ಭುವನೇಶ್ವರ ತಳವಾರ(ಕಥೆ ಹೇಳುವುದು), ಸವಿತಾ ಲಮಾಣಿ(ಭಕ್ತಿ ಗೀತೆ), ಕೌಶರ್ ನದಾಫ( ಆಶು ಭಾಷಣ), ಸೌಮ್ಯ ಮಾಮನಿ(ಮಿಮಿಕ್ರಿ) ಪ್ರಥಮ ಸ್ಥಾನ ಪಡೆದು ತಾಲೂಕು ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಪ್ರೌಢಶಾಲೆ ವಿಭಾಗದಲ್ಲಿ ಯಲ್ಲಮ್ಮ ಶಗಣಿ(ಕನ್ನಡ ಭಾಷಣ), ದಿವ್ಯಾ ಬೂದಿಹಾಳ(ಇಂಗ್ಲೀಷ್ ಭಾಷಣ), ಸಕ್ಕುಭಾಯಿ ತಳವಾರ(ಭಾವಗೀತೆ), ಭೂಮಿಕಾ ಭಂಡೂರ(ಚದ್ಮವೇಷ), ಅಶ್ವಿನಿ ಲಮಾಣಿ(ರಂಗೋಲಿ) ಹಾಗೂ ಸಾಮೂಹಿಕ ಸ್ಪರ್ಧೆಗಳಾದ ಜಾನಪದ ನೃತ್ಯದಲ್ಲಿ ಸಂಗೀತ ಕರ್ಜಗಿ ಹಾಗೂ ಸಂಗಡಿಗರು, ಕ್ವಿಜ್‌ನಲ್ಲಿ ಸೌಭಾಗ್ಯಲಕ್ಷ್ಮಿ ಸಂಗಡಿಗರು ಹಾಗೂ ಕವಾಲಿ ಸ್ಪರ್ಧೆಯಲ್ಲಿ ಸಕ್ಕೂಭಾಯಿ ತಳವಾರ ಸಂಗಡಿಗರು ಪ್ರಥಮ ಸ್ಥಾನ ಪಡೆದು ತಾಲೂಕು ಮಟ್ಟಕ್ಕೆ ಆಯ್ಕೆಯಾಗಿದ್ದಾರೆ ಎಂದು ಪ್ರಾಚಾರ್ಯ ರವಿ ಉದ್ದಣ್ಣವರ ತಿಳಿಸಿದ್ದಾರೆ.

# ಸಾರ್ವಜನಿಕ ಗಣೇಶನ ದರ್ಶನಕ್ಕೆ ಭಕ್ತರ ದಂಡು

■ ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ



ಪಟ್ಟಣ ಸೇರಿ ಸುತ್ತಲಿನ ಗ್ರಾಮೀಣ ಪ್ರದೇಶಗಳಲ್ಲಿ ಗಣೇಶ ಹಬ್ಬವನ್ನು ಶ್ರದ್ಧಾಭಕ್ತಿಯಿಂದ ಆಚರಿಸಲಾಗುತ್ತಿದೆ.

ಹಬ್ಬದ ಹಿನ್ನೆಲೆಯಲ್ಲಿ ಮನೆಯಲ್ಲಿ ಗಣಪನ ಮೂರ್ತಿ ಪ್ರತಿಷ್ಠಾಪನೆಗೆ ವಾರದಿಂದಲೇ ಸಿದ್ಧತೆ ಮಾಡಿಕೊಂಡಿದ್ದ ಪಟ್ಟಣದ ಜನತೆ, ಸೋಮವಾರ ಬೆಳಿಗ್ಗೆಯೇ ವಿಘ್ನನಿವಾರಕನ್ನು ಮನೆಗೆ ತಂದ ಬಳಿಕ ಪೂಜಾ ಕಾರ್ಯಗಳನ್ನು ಸಂಪನ್ನಗೊಳಿಸಿದರು. ಕಳೆದ ವರ್ಷಕ್ಕಿಂತ ಈ ಬಾರಿ ಗಣಪತಿ ಮೂರ್ತಿಗಳು ಕೊಂಚ ದುಬಾರಿಯಾಗಿದ್ದು, ಬಾಳೆ ದಿಂಡು, ಹೂವು-ಹಣ್ಣು ಸೇರಿ ಪೂಜಾ ಸಾಮಾಗ್ರಿಗಳ ಬೆಲೆ ಏರಿಕೆ ನಡುವೆಯೂ ಜನತೆ ಶ್ರದ್ಧಾ ಭಕ್ತಿಯಿಂದ ಗಣೇಶೋತ್ಸವ ಆಚರಿಸಿದರು.

ಪರಿಸರ ಹಾನಿ ಉಂಟುಮಾಡುವ ಪಿಒಪಿ ಗಣೇಶ ಮೂರ್ತಿಗಳನ್ನು ಸರ್ಕಾರ ನಿಷೇಧ ಮಾಡಿದ್ದರಿಂದ ಬಾಗಶಃ ಪಿಒಪಿ ಗಣಪತಿ ಮೂರ್ತಿ ಪತ್ರಿಷ್ಠಾಪನೆಗೆ ಕಡಿವಾಣ ಹಾಕಿದಂತಾಗಿದೆ.

ಸಾರ್ವಜನಿಕ ಸ್ಥಳಗಳಲ್ಲಿ ಪ್ರತಿವರ್ಷ ದೊಡ್ಡ ಗಾತ್ರದ ವಿನಾಯಕನ ಮೂರ್ತಿಗಳ ಪ್ರತಿಷ್ಠಾಪನೆ ಮಾಡುತ್ತಿದ್ದರು. ಆದರೆ ಈ ಬಾರಿ ಪಟ್ಟಣದಲ್ಲಿ ಬೃಹತ್ ಗಣಪತಿ ಮೂರ್ತಿಗಳ ಪ್ರತಿಷ್ಠಾಪನೆ ಕಡಿಮೆಯೇ ಇದೆ. ಸ್ಥಳೀಯ ಕಾಲಕಾಲೇಶ್ವರ ವೃತ್ತ, ದುರ್ಗಾ ವೃತ್ತ, ಹೆಸ್ಕಾಂ ಇಲಾಖೆಯ ಆವರಣ, ಪೊಲೀಸ್ ಠಾಣೆಯ ಮುಂಭಾಗದ ದುರ್ಗಾದೇವಿ ದೇವಸ್ಥಾನ, ಚನ್ನಮ್ಮ ವೃತ್ತ, ಅಗಸಿ ಬಾಗಿಲು ಹತ್ತಿರ ಸೇರಿ ವಿವಿಧೆಡೆ ಪ್ರತಿಷ್ಠಾಪಿಸಿರುವ ಸಾರ್ವಜನಿಕ ಗಣಪತಿಯ ದರ್ಶನ ಮಾಡಿ ಭಕ್ತರು ಪುನೀತರಾದರು.

# ಪ್ರತಿಭಾ ಕಾರಂಜಿ ಮಕ್ಕಳ ವಿಕಸನಕ್ಕೆ ಪೂರಕ



■ ವಿಜಯಸಾಕ್ಷಿ ಸುದ್ದಿ, ಮುಳಗುಂದ

ಪ್ರಾಥಮಿಕ ಹಂತದಲ್ಲಿ ಮಕ್ಕಳು ಪಾಠದ ಜೊತೆಯಲ್ಲಿ ಪಠ್ಯೇತರ ಚಟುವಟಿಕೆಯಲ್ಲಿ ಭಾಗವಹಿಸುವುದರಿಂದ ಮಕ್ಕಳ ವ್ಯಕ್ತಿತ್ವ ವಿಕಸನಗೊಳ್ಳುತ್ತದೆ ಎಂದು ಗದಗ ಡಿಡಿಪಿಐ ಎಂ.ಎ ರೆಡ್ಡೇರ ಹೇಳಿದರು.

ಅವರು ಪಟ್ಟಣದ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಜಿ.ಪಂ ಗದಗ, ತಾ.ಪಂ ಗದಗ, ಶಾಲಾ ಶಿಕ್ಷಣ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳ ಕಾರ್ಯಾಲಯ ಗದಗ ಗ್ರಾಮೀಣ ವಲಯದ ಮುಳಗುಂದ ಕ್ಲಸ್ಟರ್ ಮಟ್ಟದ ಪ್ರಾಥಮಿಕ ಹಂತದ ಪ್ರತಿಭಾ ಕಾರಂಜಿ ಉದ್ಘಾಟಿಸಿ ಮಾತನಾಡಿದರು.

ಮಕ್ಕಳಲ್ಲಿನ ಸೂಕ್ತ ಪ್ರತಿಭೆಗಳನ್ನು ಗುರುತಿಸಿ, ಅವರನ್ನು ಬೆನ್ನು ತಟ್ಟುವ ಕಾಯಕ ಪ್ರತಿಭಾ ಕಾರಂಜಿಯಿಂದ ಮಾತ್ರ ಸಾಧ್ಯವಾಗಿದ್ದು ಮಕ್ಕಳ ಪ್ರತಿಭೆಯನ್ನು ನಿರ್ಣಾಯಕರು ಸರಿಯಾಗಿ ಗುರುತಿಸಿ ಪ್ರೋತ್ಸಾಹಿಸಬೇಕು ಎಂದರು.

ಶಾಲಾ ಪ್ರಾಧನ ಗುರು ಎಚ್.ಆರ್ ಸಕ್ಕರಿ, ಎಸ್.ಆರ್ ಬಂಡಿ, ವಿ.ಎಂ ಹಿರೇಮಠ, ಸಿಆರ್‌ಪಿ ಎಂ.ಎಂ ನಿಂಬನಾಯ್ಕರ್, ಎಂ.ಎಂ ಮೆಗಲಮನಿ, ಆರ್.ಆರ್ ಪಟ್ಟಣ, ಎಸ್.ಎಂ ಉಜ್ಜಣ್ಣವರ, ಬಿ.ವಿ ಹುಡೇದ ಮುಂತಾದವರಿದ್ದರು.

# ಶ್ರೀ ವೀರಭದ್ರ ದೇವರು ನಿರ್ಭಯತೆಯ ಸಂಕೇತ



■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಶ್ರೀ ವೀರಭದ್ರ ದೇವರು ನಿರ್ಭಯತೆಯ ಸಂಕೇತವಾಗಿದ್ದಾರೆ. ರುದ್ರನ ಮಗನಾಗಿರುವ ಶ್ರೀ ವೀರಭದ್ರ ದೇವರು ಶೌರ್ಯ ಮತ್ತು ಸಾಹಸದ ಪ್ರತೀಕವಾಗಿದ್ದಾರೆ. ಆದ್ದರಿಂದ ತಮ್ಮ ಮಕ್ಕಳೂ ಸಹ ಹಾಗೆಯೇ ಆಗಲಿ ಎಂದು ಬಹುತೇಕರು ತಮ್ಮ ಮಕ್ಕಳಿಗೆ ವೀರಭದ್ರ ಎಂಬ ಹೆಸರನ್ನಿಡುವ ರೂಢಿ ಚಾಲ್ತಿಯಲ್ಲಿದೆ ಎಂದು ನರೇಗಲ್ಲ ಹಿರೇಮಠದ ಪ.ಪೂ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು ಹೇಳಿದರು.

ಇಲ್ಲಿನ ಹಿರೇಮಠದಲ್ಲಿ ಆಚರಿಸಲಾದ ಶ್ರೀ ವೀರಭದ್ರೇಶ್ವರ ಜಯಂತಿ ಕಾರ್ಯಕ್ರಮದಲ್ಲಿ ಅವರು ಆಶೀರ್ವಚನ ನೀಡಿದರು.

ಕೂರ್ಮ ಪುರಾಣ, ಸ್ಕಂದ ಪುರಾಣದಲ್ಲಿ ಶ್ರೀ ವೀರಭದ್ರ ದೇವರ ಚರಿತ್ರೆಯ ಬಗ್ಗೆ ವಿವರಣೆ ಸಿಗುತ್ತದೆ. ಶ್ರೀ ವೀರಭದ್ರ ದೇವರು ಕೆಲವಡೆಗಳಲ್ಲಿ ಲಿಂಗ ರೂಪದಲ್ಲಿ, ಕೆಲವಡೆ ಗದ್ದುಗೆ ರೂಪದಲ್ಲಿ ಮತ್ತು ಕೆಲವೆಡೆ ಮೂರ್ತಿ ರೂಪದಲ್ಲಿ ಕಾಣಸಿಗುತ್ತಾರೆ. ಕಾರಡಗಿಯಲ್ಲಿ ಗದ್ದುಗೆ ರೂಪದಲ್ಲಿದ್ದರೆ, ಹಂಪಿ ಮತ್ತಿತರ ಕೆಲವು ಕಡೆಗಳಲ್ಲಿ ಲಿಂಗ ರೂಪದಲ್ಲಿ ಮತ್ತು ಸಾಮಾನ್ಯವಾಗಿ ಮೂರ್ತಿ ರೂಪದಲ್ಲಿ ಶ್ರೀ ವೀರಭದ್ರ ದೇವರು ಕಂಡು ಬರುತ್ತಾರೆ ಎಂದು ಶ್ರೀಗಳು ಹೇಳಿದರು.

ಜಾತಿ, ಮತ, ಪಂಥ ಭೇದವಿಲ್ಲದೆ ಶ್ರೀ ವೀರಭದ್ರ ದೇವರನ್ನು ಪೂಜಿಸುವುದನ್ನು ನಾವು ಹಲವಾರು ಊರುಗಳಲ್ಲಿ ಕಾಣುತ್ತೇವೆ.

ಮುಖ್ಯವಾಗಿ ಭಯವನ್ನು ದೂರೀಕರಿಸುವ ದೇವರಾಗಿ ಶ್ರೀ ವೀರಭದ್ರ ದೇವರು ಕಂಡು ಬರುತ್ತಾರೆ. ರುದ್ರನ 11 ಲೀಲೆಗಳು, ಶಿವನ 12 ಲೀಲೆಗಳು, ವೀರಭದ್ರೇಶ್ವರನ 2 ಲೀಲೆಗಳು ಸೇರಿ 25 ಲೀಲೆಗಳ ಬಗ್ಗೆ ವಿವರಣೆ ಸಿಗುತ್ತದೆ ಎಂದು ಶ್ರೀಗಳು ತಿಳಿಸಿದರು.

ಈ ಸಂದರ್ಭದಲ್ಲಿ ಡಾ. ಆರ್.ಕೆ ಗಚ್ಚಿನಮಠ, ಈಶ್ವರ ಬೆಟಗೇರಿ, ಶ್ರೀ ರೇಣುಕಾಚಾರ್ಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕಿ ನಿರ್ಮಲಾ ಹಿರೇಮಠ, ಶಾಲಾ ಸಿಬ್ಬಂದಿಯವರಿದ್ದರು.

## ಲಿಂಗಾಯತ ಪ್ರಗತಿಶೀಲ ಸಂಘದ ಶಿವಾನುಭವ ಕಾರ್ಯಕ್ರಮದಲ್ಲಿ ಐ.ಬಿ ಬೆನಕೊಪ್ಪ ಅಭಿಮತ

# ಹಾನಗಲ್ ಕುಮಾರ ಸ್ವಾಮಿಗಳು ಕಾರಣಿಕ ಯುಗಪುರುಷರು

■ ವಿಜಯಸಾಕ್ಷಿ ಸುದ್ದಿ, ಗದಗ



ಹಾನಗಲ್ ಕುಮಾರ ಸ್ವಾಮಿಗಳು ಸಮಾಜದ ಶ್ರೇಯೋಭಿವೃದ್ಧಿಗಾಗಿ ಹಗಲಿರುಳು ಶ್ರಮಿಸಿದ್ದಾರೆ. ಮಠದ ಸ್ವಾಮಿಗಳಾದರಷ್ಟೇ ಸಾಲದು, ಮಠದ ಸ್ವಾಮಿಗಳಾದವರು ನಿರಂತರ ಸಮಾಜಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು ಎಂದು ಕಲಿಸಿಕೊಟ್ಟವರು ಹಾನಗಲ್ ಕುಮಾರ ಸ್ವಾಮಿಗಳು ಎಂದು ಉಪನ್ಯಾಸಕ ಐ.ಬಿ ಬೆನಕೊಪ್ಪ ಅವರು ಹೇಳಿದರು.

ಲಿಂಗಾಯತ ಪ್ರಗತಿಶೀಲ ಸಂಘದ 2659ನೇ ಶಿವಾನುಭವದಲ್ಲಿ ಉಪನ್ಯಾಸ ನೀಡಿದ ಅವರು, ಹಾನಗಲ್ ಕುಮಾರ ಸ್ವಾಮಿಗಳು ಮಠಗಳಲ್ಲಿ ಪ್ರಸಾದ ನಿಲಯ, ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಲು ಪ್ರೇರಣೆ ನೀಡುವ ಮೂಲಕ ಮಠದ ಸ್ವಾಮಿಗಳಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಿದ್ದಾರೆ. ಹಳ್ಳಿ ಹಳ್ಳಿಗೆ ಸಂಚರಿಸಿ ಬಡವರ ಉದ್ಧಾರ, ಧಾರ್ಮಿಕ ಸಂಸ್ಕಾರ, ಶಿಕ್ಷಣ ನೀಡುವ ಕಾಯಕ ಮಠಗಳಿಂದ ಆಗಬೇಕು ಎಂಬ ಸಂದೇಶ ನೀಡಿದ್ದಾರೆ ಎಂದು ಹೇಳಿದರು.

ಶಿವಾನುಭವ ಕಾರ್ಯಕ್ರಮದಲ್ಲಿ ಸಮ್ಮುಖ ವಹಿಸಿದ್ದ ಭೈರನಹಟ್ಟಿ ಪೂಜ್ಯ ಶಾಂತಲಿಂಗ ಸ್ವಾಮಿಗಳು ಮಾತನಾಡಿ, ಅಥಣಿ ಮುರುಘೇಂದ್ರ ಶಿವಯೋಗಿಗಳು ಅಪೂರ್ವ ಸಾಧಕರಲ್ಲಿ ಒಬ್ಬರು. ವಚನಗಳೆಂದರೆ ಅವರಿಗೆ ಬಹಳ ಪ್ರೀತಿ. ನಿತ್ಯವೂ ತಪ್ಪದೇ ವಚನ ಪಠಣ ಮಾಡುತ್ತಿದ್ದರು. ಅಪ್ಪಟ ಬಸವ ಅನುಯಾಯಿಗಳು. ಹಾನಗಲ್ ಕುಮಾರಸ್ವಾಮಿಗಳು ಧಾರ್ಮಿಕ, ಆಧ್ಯಾತ್ಮಿಕ, ಶೈಕ್ಷಣಿಕ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಶಿವಯೋಗ ಮಂದಿರವನ್ನು ಸ್ಥಾಪಿಸಿ ನಾಡಿನ ಸರ್ವತೋಮುಖ ಏಳಿಗೆಗಾಗಿ ಅನೇಕ ಸಾಧಕರನ್ನು ನಾಡಿಗೆ ಕೊಡುಗೆಯಾಗಿ ನೀಡಿದ್ದಾರೆ ಎಂದು ತಿಳಿಸಿದರು. ಹಾನಗಲ್ ಪೂಜ್ಯ ಶ್ರೀ ಕುಮಾರಸ್ವಾಮಿಗಳ 156ನೇ ಜಯಂತಿಯನ್ನು ಆಚರಿಸಲಾಯಿತು. ಶ್ರೇಷ್ಠ ಉದ್ಯಮಿ ಪ್ರಶಸ್ತಿಗೆ ಭಾಜನರಾದ ಭೂಷಣ ಪ್ರಕಾಶ ಶಹಾ ಅವರನ್ನು ಸನ್ಮಾನಿಸಲಾಯಿತು. ಗುರುನಾಥ ಸುತಾರ ಮತ್ತು ಮೃತ್ಯುಂಜಯ ಹಿರೇಮಠ ತಂಡದವರು ವಚನ ಸಂಗೀತ ಹಾಡಿದರು. ಚಂದ್ರಿಕಾ ಎಂ.ಹೊಂಬಳ ಧರ್ಮಗ್ರಂಥ ಪಠಣಗೈದರು. ಲಕ್ಷ್ಮಿ ವಿ.ಪಟ್ಟಣ ಇವರಿಂದ ವಚನ ಚಿಂತನ ನಡೆಯಿತು. ಶಿವಾನುಭವ ಭಕ್ತಿಸೇವೆಯನ್ನು ಕಾರಟಗಿಯ ಸಣ್ಣಸೂಗಪ್ಪನವರು ವಹಿಸಿಕೊಂಡಿದ್ದರು.

ಸರ್ವರನ್ನು ಲಿಂಗಾಯತ ಪ್ರಗತಿಶೀಲ ಸಂಘದ ಅಧ್ಯಕ್ಷ ಶೇಖಣ್ಣ ಕಳಸಾಪೂರ ಸ್ವಾಗತಿಸಿದರು. ರತ್ನಕ್ಕ ಪಾಟೀಲ ಕಾರ್ಯಕ್ರಮ ನಿರೂಪಿಸಿದರು. ಉಪಾಧ್ಯಕ್ಷ ಬಾಲಚಂದ್ರ ಭರಮಗೌಡರ, ರೇಣುಕಾ ವಿ.ಕರೇಗೌಡ್ರ, ಕಾರ್ಯದರ್ಶಿ ಮಹೇಶ ಗಾಣಿಗೇರ, ಸಹಕಾರ್ಯದರ್ಶಿ ವಿಜಯಕುಮಾರ ಹಿರೇಮಠ, ವಿರುಪಾಕ್ಷಪ್ಪ ಅರಳಿ, ಸಂಘಟನಾ ಕಾರ್ಯದರ್ಶಿ ಅಶೋಕ ಹಾದಿ, ಕೋಶಾಧ್ಯಕ್ಷ ಸುರೇಶ ನಿಲೂಗಲ್, ಶಿವಾನುಭವ ಸಮಿತಿ ಚೇರಮನ್ ವಿವೇಕಾನಂದಗೌಡ ಪಾಟೀಲ ಉಪಸ್ಥಿತರಿದ್ದರು.

> ಸಮಾಜ ಬದಲಾವಣೆಯನ್ನು ಹೊಂದಬೇಕಾದರೆ ಕಾಲಮಾನಕ್ಕೆ ತಕ್ಕಂತೆ ಯುಗಪುರುಷರ ಉದಯವಾಗುತ್ತದೆ ಎಂದು ಹೇಳಲಾಗುತ್ತದೆ. ಅಂತಹ ಕಾರಣಿಕ ಯುಗಪುರುಷರೇ ನಮ್ಮ ಹಾನಗಲ್ಲ ಕುಮಾರಸ್ವಾಮಿಗಳವರು.
>
> – ಐ.ಬಿ ಬೆನಕೊಪ್ಪ, ಉಪನ್ಯಾಸಕರು.

# ಎಸ್‌ಡಿಎಂಸಿ ಅಧ್ಯಕ್ಷರಾಗಿ ಮಲ್ಲಪ್ಪ ಗೋಲಪ್ಪನವರ

■ ವಿಜಯಸಾಕ್ಷಿ ಸುದ್ದಿ, ಮುಳಗುಂದ



ಸಮಿಪದ ನಾಗಾವಿ ಗ್ರಾಮದ ದಿ. ವಿರೂಪಾಕ್ಷಪ್ಪ ಸೋಮಪ್ಪ ಚಿಂಚಲಿ ಉನ್ನತೀಕರಿಸಿದ ಸರಕಾರಿ ಪ್ರೌಢಶಾಲೆಯ ಎಸ್‌ಡಿಎಂಸಿ ನೂತನ ಅಧ್ಯಕ್ಷರಾಗಿ ಮಲ್ಲಪ್ಪ ಗೋಲಪ್ಪನವರ ಆಯ್ಕೆಯಾದರು. ಸದಸ್ಯರಾಗಿ ಮುತ್ತಪ್ಪ ಮಲ್ಲಮ್ಮನವರ, ನಬೀಸಾಬ ಚಿಂಚಲಿ, ರಾಘವೇಂದ್ರ ಬಡಿಗೇರ, ರಮೇಶ ಚಿಂಚಲಿ, ರೇಖಾ ರಂಗನಗೌಡರ, ಗೀತಾ ಅಳಗವಾಡಿ, ಗೌರವ್ವ ಗುಡಿಮನಿ, ಕಸ್ತೂರವ್ವ ಭಾವಿಮನಿ ಆಯ್ಕಯಾದರು.

ಗದಗ ಗ್ರಾಮೀಣ ಕ್ಷೇತ್ರ ಶಿಕ್ಷಣಾಧಿಕಾರಿ ವಿ.ವಿ ನಡುವಿನಮನಿ, ಸಿಆರ್‌ಪಿ ಇಮಾಮಸಾಬ ಗಾಡಗೋಳಿ, ಬಿ.ವಾಯ್ ಹುಡೆದಮನಿ, ಶಾಲಾ ಗುರುಮಾತೆ ಜೆ.ಎಂ ಮುತ್ತಿನಪೆಂಡಿಮಠ, ಎ.ಬಿ ಗುರ್ಲಹೊಸೂರ, ಎಂ.ಎಂ ಬಾಗಲಿ, ಎ.ಎ ಬಂಡಿವಾಡಮಠ, ಜೆ.ಎಸ್ ಛಲವಾದಿ, ವಿ.ಎಂ ಖ್ಯಾಡದ, ಎಸ್.ಎಸ್ ಹತ್ತಿ, ಎಂ.ವಿ ಹಿರೇಮಠ ಕಾವೇರಿ ಕರಮಳ್ಳಿ ಇದ್ದರು.

# ನಿಶ್ಚಿತ ಗುರಿಯೊಂದಿಗೆ ಯಶಸ್ಸು ಸಾಧಿಸಿ



■ ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ

ಹಳ್ಳಿಗಳು ಅಭಿವೃದ್ಧಿ ಹೊಂದಬೇಕಾದರೆ ಶಿಕ್ಷಣ ಬಲವರ್ಧನೆಗೊಳ್ಳಬೇಕು. ವಿದ್ಯಾರ್ಥಿಗಳು ಸತತ ಪರಿಶ್ರಮ, ನಿಶ್ಚಿತ ಗುರಿಯೊಂದಿಗೆ ಯಶಸ್ಸು ಕಾಣಬೇಕು ಎಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕ್ಷೇತ್ರ ಯೋಜನಾಧಿಕಾರಿ ವಿಶಾಲಾ ಮಲ್ಲಾಪೂರ ಹೇಳಿದರು.

ಇಲ್ಲಿಯ ಬಿ.ಎಚ್ ಪಾಟೀಲ ಸಂಯುಕ್ತ ಪದವಿಪೂರ್ವ ಕಾಲೇಜ್‌ನ ಪ್ರೌಢಶಾಲೆಯಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ ಟ್ರಸ್ಟ್ ಮುಂಡರಗಿ ಮತ್ತು ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಬೆಳ್ತಂಗಡಿ ಇವರ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಆರೋಗ್ಯ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು.

ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆಯ ಗದಗ ಜಿಲ್ಲಾ ಸದಸ್ಯ ಜನಪದ ಕಲಾವಿದ ಗವಿಶಿದ್ಧಯ್ಯ ಹಳ್ಳಿಕೇರಿಮಠ ಮಾತನಾಡಿ, ಸಾಧಿಸಲು ಇಂದು ಸಾಕಷ್ಟು ವೇದಿಕೆಗಳಿದ್ದು, ವಿದ್ಯಾರ್ಥಿಗಳು ಅವುಗಳನ್ನು ಬಳಸಿಕೊಂಡು ಭವಿಷ್ಯ ರೂಪಿಸಿಕೊಳ್ಳಬೇಕೆಂದರು. ಸಂಪನ್ಮೂಲ ವ್ಯಕ್ತಿಗಳಾದ ಹಿರಿಯ ಶಿಕ್ಷಕ ಎ.ಎನ್ ಪೂಜಾರ, ಶಿಕ್ಷಕ ಬಸವರಾಜ ಕಣವಿ ಉಪನ್ಯಾಸಗಳ ಮೂಲಕ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು.

ಜನತಾ ವಿದ್ಯಾವರ್ಧಕ ಸಂಸ್ಥೆಯ ಅಧ್ಯಕ್ಷ ಆಯ್.ಎನ್ ಕುಂಬಾರ ಕಾರ್ಯಕ್ರಮ ಉದ್ಘಾಟಿಸಿದರು. ಗ್ರಾ.ಪಂ ಅಧ್ಯಕ್ಷ ಕೆಂಚಪ್ಪ ಪೂಜಾರ ಅಧ್ಯಕ್ಷತೆ ವಹಿಸಿದ್ದರು. ವಲಯ ಮೇಲ್ವಿಚಾರಕರಾದ ದಾದಕಲಾಂದರ್ ಪ್ರತಿಜ್ಞಾವಿಧಿ ಬೋಧಿಸಿದರು.

ವಿ.ಎಸ್ ಕೊಣ್ಣೂರು ಸ್ವಾಗತಿಸಿದರು. ಡಿ.ಡಿ ಕಿತ್ತೂರು ನಿರೂಪಿಸಿದರು. ಗ್ರಾ.ಪಂ ಸದಸ್ಯೆ, ಸೇವಾ ಪ್ರತಿನಿಧಿ ರಜಿಯಾ ಬೇಗಂ ತಹಸೀಲ್ದಾರ ವಂದಿಸಿದರು.



ಮುಂಡರಗಿಯ ವಿದ್ಯಾ ನಗರದಲ್ಲಿ ಗೌರಿಪುತ್ರ ತರುಣ ಸಂಘದಿಂದ ಪ್ರತಿಷ್ಠಾಪಿಸಿರುವ ಗಣಪತಿ.



ಗದಗದಲ್ಲಿ ನಡೆದ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟದಲ್ಲಿ ವಿಭಾಗ ಮಟ್ಟಕ್ಕೆ ಲಕ್ಷ್ಮೇಶ್ವರ ತಾಲೂಕಿನ ಗೊಜನೂರಿನ ಮೊರಾರ್ಜಿ ವಸತಿ ಶಾಲೆಯ ವೈಷ್ಣವಿ ಸಂಜೀವನ್ನವರ 400 ಮೀ ಮತ್ತು 1500 ಮೀ ಓಟದಲ್ಲಿ ಪ್ರಥಮ, ಕೀರ್ತಿ ಸೊರಟೂರ 800 ಮೀ ಓಟದಲ್ಲಿ ಪ್ರಥಮ, ಮೇಘಾ ಲಮಾಣಿ 3000 ಮೀ ಓಟದಲ್ಲಿ ದ್ವಿತೀಯ ಹಾಗೂ ವಿದ್ಯಾ ಬಾರಕೇರ ತೃತೀಯ ಸ್ಥಾನ ಪಡೆದಿದ್ದಾರೆ.

## ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಶಾಸಕ ಡಾ. ಚಂದ್ರು ಲಮಾಣಿ ಅಭಿಮತ

# ಪ್ರತಿಭೆಯೆಂಬುದು ಯಾರೊಬ್ಬರ ಸೊತ್ತಲ್ಲ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ



ಕನ್ನಡ ಮಾಧ್ಯಮದವರೆಂದು ಕೀಳರಿಮೆ ಬೆಳೆಸಿಕೊಳ್ಳಬೇಡಿ. ಕನ್ನಡ ಮಾಧ್ಯಮದಲ್ಲಿಯೇ ಕಲಿತು ಇಂದು ದೇಶದ ಅನೇಕ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರಿದ್ದಾರೆ. ಪ್ರತಿಭೆ ಎನ್ನುವದು ಯಾರೊಬ್ಬರ ಸೊತ್ತಲ್ಲ. ಸಾಧನೆ ಮಾಡುವ ಗುರಿ ಇರುವ ಎಲ್ಲರಲ್ಲೂ ಪ್ರತಿಭೆ ಇದ್ದೇ ಇರುತ್ತದೆ ಎಂದು ಶಾಸಕ ಡಾ.ಚಂದ್ರು ಲಮಾಣಿ ಅಭಿಪ್ರಾಯಪಟ್ಟರು.

ಅವರು ಪಟ್ಟಣದ ತಾಯಿ ಪಾರ್ವತಿ ಮಕ್ಕಳ ಬಳಗದ ಶ್ರೀ ಪಾರ್ವತಿಬಾಯಿ ಎಸ್.ಬಹದ್ದೂರದೇಸಾಯಿ ಬಾಲಕಿಯರ ಪ್ರೌಢಶಾಲೆಯ ಸಭಾ ಭವನದಲ್ಲಿ ಗಜಾನನೋತ್ಸವ ಅಂಗವಾಗಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿದ ವಿದ್ಯಾರ್ಥಿನಿಯರಿಗೆ ಬುಧವಾರ ಹಮ್ಮಿಕೊಳ್ಳಲಾಗಿದ್ದ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಸಾಧಕರೊಂದಿಗೆ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿ ಸುವುದರಿಂದ ಮುಂದಿನ ದಿನಗಳಲ್ಲಿ ಸಾಧಕರ ಸಾಲಿನಲ್ಲಿ ನಿಲ್ಲಲು ಸಜ್ಜಾಗುತ್ತಾರೆ. ಹಾಗೆಯೇ ಸಮಾಜಕ್ಕೆ ತಮ್ಮದೇ ಆದ ರೀತಿಯಲ್ಲಿ ಕೊಡುಗೆಯನ್ನು ನೀಡುತ್ತಾರೆ. ಸುಂದರವಾದ ಬದುಕನ್ನು ರೂಪಿಸಿಕೊಳ್ಳಲು ವಿದ್ಯಾರ್ಥಿ ಜೀವನ ಒಂದು ಮಹತ್ವದ ಸಮಯ. ಮುಂದಿನ ಪೀಳಿಗೆ ಸಮಾಜಕ್ಕೆ ಆಸ್ತಿಯಾಗಬೇಕೇ ವಿನಃ ಹೊರೆಯಾಗಬಾರದು. ಪ್ರತಿಭಾನ್ವಿತ ವಿದ್ಯಾರ್ಥಿಗಳ ಪ್ರತಿಭೆಯನ್ನು ಇಮ್ಮಡಿಗೊಳಿಸಲು ಪ್ರತಿಭಾ ಪುರಸ್ಕಾರ ಕಾರ್ಯಕ್ರಮಗಳು ನಡೆಯುತ್ತಿರಬೇಕು ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಜಿ.ಎಂ ಮುಂದಿನಮನಿ, ಶಾರಕ್ಕನವರು ಮಹಾಂತಶೆಟ್ಟರ ಮಾತನಾಡಿದರು. ಮುಖ್ಯೋಪಾಧ್ಯಾಯ ಜೆ.ಡಿ ಲಮಾಣಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಬಳಗದ ಅಧ್ಯಕ್ಷೆ ಸುವರ್ಣಬಾಯಿ ಬಹದ್ದೂರದೇಸಾಯಿ, ಸದಸ್ಯರಾದ ರೋಹಿಣಿಬಾಯಿ ಬಹದ್ದೂರದೇಸಾಯಿ, ಮಹೇಶ ಲಿಂಬಯ್ಯಸ್ವಾಮಿಮಠ ಉಪಸ್ಥಿತರಿದ್ದರು. ಎ.ಸಿ ಹಿರೇಮಠ, ಆರ್.ಸಿ ಉಮಚಗಿ, ಎಸ್.ಎಂ ಹಾದಿಮನಿ, ಶೀಲಾ ತಳವಾರ ನಿರೂಪಿಸಿದರು. ಎನ್.ಡಿ ಗೌರಿ, ಎಸ್.ಎಸ್ ಮಠದ, ಪಿ.ಎಲ್ ಪಾಟೀಲ, ಡಿ.ಜಿ ವೈದ್ಯ, ಕಾವ್ಯಾ ದೇಸಾಯಿ, ಶ್ವೇತಾ ಅಂಬಲಿ ಹಾಜರಿದ್ದರು.

> ಅಧ್ಯಕ್ಷತೆ ವಹಿಸಿದ್ದ ಜಯಲಕ್ಷ್ಮೀ ಗಡ್ಡದ್ದೇವರಮಠ ಮತ್ತು ಅತಿಥಿಗಳಾಗಿದ್ದ ಜಯಲಕ್ಷ್ಮೀ ಮಹಾಂತಶೆಟ್ಟರ ಮಾತನಾಡಿ, ಕನ್ನಡ ಮಾಧ್ಯಮದಲ್ಲಿ ಓದಿದವರು ಬಹಳಷ್ಟು ಜನ ಉನ್ನತ ಹುದ್ದೆಯಲ್ಲಿದ್ದಾರೆ. ಚಂದ್ರಯಾನ-3 ಯಶಸ್ವಿಯಾಗಿ ಕೈಗೊಂಡ ವಿಜ್ಞಾನಿಗಳಲ್ಲಿ ಕನ್ನಡ ಮಾಧ್ಯಮದಲ್ಲಿ ಓದಿದವರೇ ಹೆಚ್ಚಾಗಿದ್ದರು. ಹೆಣ್ಣು ಮಕ್ಕಳು ಶಿಕ್ಷಣ ಪಡೆಯುವುದರಿಂದ ಸುಂದರ, ಸ್ವಚ್ಛ ಸಮಾಜ ನಿರ್ಮಾಣವಾಗುತ್ತದೆ ಎಂದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka